ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
EMAIL : dairyadadaari@gmail.com ಸಂಪುಟ: 01 ಸಂಚಿಕೆ: 185
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795
ಬುಧವಾರ: 01-07-2026

## ವಿದ್ಯುತ್ ನೌಕರರ ಅಭಿಪ್ರಾಯವೇ ನನ್ನ ಅಭಿಪ್ರಾಯ: ಮುಖ್ಯಮಂತ್ರಿ ಡಿಕೆ ಶಿವಕುಮಾರ್

## ಖಾಸಗೀಕರಣಕ್ಕೆ ಅವಕಾಶ ನೀಡದಂತೆ ಮನವಿ; ಸಚಿವ ಸಂಪುಟದಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಪ್ರಕಟಿಸುವುದಾಗಿ ಘೋಷಣೆ

**ಬೆಂಗಳೂರು :**ಯಾವನೇ ಒಬ್ಬ ವ್ಯಕ್ತಿಗೆ ಗ್ರಾಹಕರಿಗೆ ಶಾಸಕನ ಫೋನು ಅಥವಾ ಶಾಸಕ ಕಲೆಕ್ಷನ್ ಇಲ್ಲದೆ ಹೋಗಬಹುದು. ಆದರೆ ಪ್ರತಿಯೊಬ್ಬ ಇಂಜಿನಿಯರ್ ಪ್ರತಿಯೊಬ್ಬ ಪವರ್ ಮ್ಯಾನ್ ಕನೆಕ್ಷನ್ ಕೂಡ ಯಾವಾಗಲೂ ಕೂಡ ಆ ಫೋನ್ ನಂಬರ್ ಇಟ್ಕೊಂಡೆ ಇರ್ತಾನೆ. ಅಂದ್ರೆ ಯಾವ ರೀತಿ ಸಂಪರ್ಕದಲ್ಲಿ ನಿಮ್ಮ ಜೊತೆ ಇರುತ್ತಾನೆ ಅನ್ನೋದಕ್ಕೆ ಇದು ಸಾಕ್ಷಿ. ನೀವು ಸರ್ಕಾರ ತರಬಹುದು, ಸರ್ಕಾರನ ತೆಗೆಯಬಹುದು. ಅದು ಕೂಡ ನಿಮ್ಮ ಹತ್ತಿರ ಶಕ್ತಿ ಇದೆ, ಅದು ಕೂಡ ನನಗೆ ಅರಿವಿದೆ.ಹಾಗೇ ಅಂತ ಮೇಲಕ್ಕೆ ಹೋಗಬೇಡಿ, ಸ್ವಲ್ಪ ಭೂಮಿ ಮೇಲೆ ಇರಿ ನೀವು. ಮತ್ತೆ ಇವತ್ತು ತಾವೆಲ್ಲ. ನಾನೀಗಾಗಲೇ ಹೇಳಿದಾಂಗೆ ಬೆಳಕಿನಿಂದೆ ಬೇಕಾದಷ್ಟು ಶ್ರಮ ಇದೆ. ಕತ್ತಲನ್ನು ದೂರ ಮಾಡುವಂತಹ ಕಾಯಕದ ಜೀವಿಗಳು ತಾವೆಲ್ಲ ಹಗಲು ರಾತ್ರಿಯೆಲ್ಲಾ ತಾವೆಲ್ಲ ದುಡಿತಾ ಇದ್ದೀರಿ ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ ಹೇಳಿದರು.

ಅವರು ಇಂದು ಸೋಮವಾರ ಬೆಂಗಳೂರಿನ ತ್ರಿಪುರ ವಾಸಿನಿ ಅರಮನೆ ಮೈದಾನ ಗೇಟ್ ಸಂಖ್ಯೆ ಎರಡರಲ್ಲಿ ಆಯೋಜಿಸಿರುವ ಅಭಿನಂದನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ನಾನು ಈ ಇಲಾಖೆಯ ಜವಾಬ್ದಾರಿ ತೆಗೆದುಕೊಂಡಾಗ. ಸಿದ್ದರಾಮಯ್ಯನವರ ಕಾಲದಲ್ಲಿ ನಿಮ್ಮ ಇಲಾಖೆ ಹೇಗಿತ್ತು, ಈಗ ಹೇಗಿದೆ ಅಂತ ಹೇಳಿ. ನೀವು ಕಲ್ಪನೆ ತಾವೆಲ್ಲ ಮಾಡಿಕೊಳ್ಳಬೇಕು.ನನಗೆ ಯಾರೋ ಹೇಳಿದ್ರು ಈ ವಿದ್ಯುತ್ ಇಲಾಖೆ ತೆಗೆದುಕೊಳ್ಳಬೇಡ, ಕೆಟ್ಟ ಹೆಸರು ಬಂದುಬಿಡುತ್ತದೆ. ಈ ಪವರ್ ಕಟ್ಟು, ಮಳೆ ಇಲ್ಲ, ಸಮಸ್ಯೆ ಇದೆ ಇದನ್ನು ಬೇಡ ಅಂತ ಹೇಳಿ ನನಗೆ ಅಡ್ವೈಸ್ ಮಾಡಿದ್ರು. ನನಗೆ ಹಿಸ್ಟರಿ ಓದೋದ್ರಲ್ಲಿ ನಂಬಿಕೆ ಇಲ್ಲ ಹಿಸ್ಟರಿನ ಬರೆಯೋದ್ರಲ್ಲೂ ನಂಬಿಕೆ ಇಲ್ಲ. ಐ ಡೋಂಟ್. ಬಿಲೀವ್ ಇನ್ ರೈಟಿಂಗ್ ಹಿಸ್ಟರಿ ಆರ್ ರೀಡಿಂಗ್ ಹಿಸ್ಟರಿ. ಐ ಬಿಲೀವ್ ಇನ್ ಕ್ರಿಯೇಟಿಂಗ್ ಹಿಸ್ಟರಿ ಅದನ್ನ ಗುರಿ ಇಟ್ಕೊಂಡು ನನ್ನ ಕೆಲಸವನ್ನ ನಾನು ಮಾಡಿದ್ದೇನೆ.

ಇವತ್ತು ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಶಕ್ತಿ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಏನು ನಾನು ತೀರ್ಮಾನವನ್ನು ಮಾಡಿದ್ದೇನೆ. ನನ್ನ ತೀರ್ಮಾನ ಇಡೀ ರಾಷ್ಟ್ರಕ್ಕೆ ಒಂದು ಮಾದರಿಯಾದಂತಹ ತೀರ್ಮಾನ ಅಂತ ಹೇಳಲಿಕ್ಕೆ ನನಗೆ ಬಹಳ ಸಂತೋಷ ಆಗುತ್ತದೆ.



10–90% ಟ್ರಾನ್ಸ್ಮಿಷನ್ ಲಾಸ್ ಇತ್ತು. ಆ ಲಾಸ್ ಇವತ್ತು 10% ಗೆ ಇಳಿದೆ. ಇವತ್ತು ಇಂಧನ ಸಚಿವರಾದ ಜಾರ್ಜ್ ಅವರು ನೆನಪು ಮಾಡ್ತಾ ಇದ್ರು. 13,000 ಎಕರೆ ಜಮೀನನ್ನ ಒಂದೇ ಜಾಗದಲ್ಲಿ ಒಂದು ಎಕರೆ ಕೂಡ ಅಕ್ವಿಸಿಷನ್ ಮಾಡದೆ ಸುಮಾರು 2,400 ಮೆಗಾವಾಟ್ ಉತ್ಪಾದನೆ ಮಾಡಿ ಆ ರೈತರೇ ಆ ರೈತರ ಜಮೀನಿನ ಮಾಲಿಕತ್ವವನ್ನು ಇಟ್ಕೊಂಡು ಇವತ್ತು ಅಲ್ಲೊಂದು ದೊಡ್ಡ ಸೋಲಾರ್ ಪಾರ್ಕ್ ಮಾಡಿದ್ದೀವಲ್ಲ. ಅವತ್ತಿನ ಕಾಲಕ್ಕೆ ದೇಶದಲ್ಲಿ ಅದು ಒಂದು ಇತಿಹಾಸ. ಇವತ್ತು ಅನೇಕ ರಾಜ್ಯಗಳಲ್ಲಿ ದೇಶಗಳಲ್ಲಿ ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಅವತ್ತು ಏನು ತೀರ್ಮಾನ ಮಾಡಿದ್ರು? ಅದನ್ನ ನೀವೆಲ್ಲ ಡಿಸ್ಟ್ರಿಬ್ಯೂಷನ್ಸ್ ಕೂಡ ಪ್ರತಿ ತಾಲೂಕಲ್ಲೂ 20 ಮೆಗಾವಾಟ್, 50 ಮೆಗಾವಾಟ್ ಅಂತ ಹೇಳಿ ಟೆಂಡರ್ ಕರೆದು. ಅಲ್ಲೇ ವಿದ್ಯುತಿನ ಉತ್ಪಾದನೆ ಮಾಡಿ, ಅಲ್ಲೇ ರೈತರಿಗೆ ಕೊಟ್ಟು, ಈ ಟ್ರಾನ್ಸ್ಮಿಷನ್ ಅನ್ನ ಲಾಸ್ ಅನ್ನ ಉಳಿಸಿ ರೈತರನ್ನ ಬದುಕಿಸಬೇಕು. ಅಂತ ಹೇಳಿ ಏನು ಅವತ್ತಿನ ಕಾಲದಲ್ಲಿ ತೀರ್ಮಾನ ತೆಗೆದುಕೊಂಡೆ. ಅದು ಕೂಡ ಇತಿಹಾಸ. ಅದನ್ನ ಗಮನಿಸಿ ಕೇಂದ್ರ ಸರ್ಕಾರದವರು ಇವತ್ತು ಏನು ಕುಸುಮಾ ಯೋಜನೆ ಅಂತ ಹೇಳಿ ತಂದಿದ್ದಾರೆ. ಅದು ನನ್ನ ಕಾರ್ಯಕ್ರಮದ ಪ್ರೇರೇಪಣೆ ಅನ್ನೋದನ್ನ ತಮಗೆಲ್ಲರಿಗೂ ಕೂಡ ಗೊತ್ತಿರುವಂತಹ ಒಂದು ವಿಚಾರ.ಆದ್ದರಿಂದ ಇವತ್ತು. ಗಡಿಯಲ್ಲಿ ಸೈನಿಕರು ಇರುತ್ತಾರೆ, ಶಾಲೆ. ಶಿಕ್ಷಕರು ಇರುತ್ತಾರೆ, ಕಾರ್ಖಾನೆಯಲ್ಲಿ ಕಾರ್ಮಿಕ ಇದ್ದಾನೆ, ಹೊಲದಲ್ಲಿ ಕೃಷಿಕ ಇರುತ್ತಾನೆ, ನಮ್ಮ ಮನೆಗಳಲ್ಲಿ ನಮ್ಮ ತಾಯಿ ಯಾವ ರೀತಿ ಪೋಷಣೆ ಮಾಡುತ್ತಾರೆ ಹಾಗೆ ನೀವೆಲ್ಲ ಕೂಡ ಬೆಳಕನ್ನು ಕೊಡ್ತಾ ಇರುವಂತಹ ಧೀಮಂತ ಕಾರ್ಯಕರ್ತರು ಮತ್ತು ಸಿಬ್ಬಂದಿಗಳು ನಿಮ್ಮ ಸೇವೆಯನ್ನ ಎಲ್ಲರೂ ಕೂಡ ಸ್ಮರಿಸುತ್ತಾರೆ. ಅಂದು ಇಂದಿರಾ ಗಾಂಧಿಯವರ ಕಾಲದಲ್ಲಿ ನಿಮ್ಮ ಸಂಸ್ಥೆಗಳಿಗೆ ಹೊಸ ರೂಪವನ್ನು ಕೊಟ್ಟಾಗ ಅಂದ್ರೆ ಕಾಂಗ್ರೆಸ್ ಸರ್ಕಾರ ಇಂದಿರಾ ಗಾಂಧಿಯವರ ಕಾಲದಲ್ಲಿ ನಿಮ್ಮ ಮ್ಯಾನೇಜ್ಮೆಂಟ್ ಪ್ರತಿನಿಧಿಯನ್ನ ನಮ್ಮ ಮ್ಯಾನೇಜ್ಮೆಂಟ್ ಜೊತೆಯಲ್ಲಿ ಸರ್ಕಾರದ ಜೊತೆಯಲ್ಲಿ ಇರಬೇಕು ಅಂತ ತೀರ್ಮಾನ ಮಾಡಿದ್ದು ಶ್ರೀಮತಿ ಇಂದಿರಾ ಗಾಂಧಿಯವರು ಅನ್ನೋದನ್ನ ತಾವು ಯಾವುದಕ್ಕೂ ಕೂಡ ಮುರಿಯಬಾರದು. ನಾನು. ಆಗಾಗ ಒಂದು ಮಾತು ಹೇಳ್ತಾ ಇರ್ತೀನಿ. ಇಫ್ ಯು ಫರ್ಗೆಟ್ ದಿ ರೂಟ್, ಯು ವಿಲ್ ನಾಟ್ ಗೆಟ್ ದಿ ಫ್ರೂಟ್ ಅಂತ. ಹಂಗೆ ನಿಮ್ಮ ಧ್ವನಿಯನ್ನ ಇಲಾಖೆಯ ವ್ಯವಸ್ಥೆಯಲ್ಲಿ ನಿಮ್ಮ ಧ್ವನಿಯನ್ನ ಆಡಳಿತದಲ್ಲಿ ನಿಮ್ಮ ಅಭಿಪ್ರಾಯವನ್ನ ನಿಮ್ಮೆಲ್ಲರ ಅಭಿಪ್ರಾಯವನ್ನ ನಿಮ್ಮ ಪ್ರತಿನಿಧಿಗಳು ನಮ್ಮ ಇಲಾಖೆಯ ಬೋರ್ಡ್ ನಲ್ಲಿ ಎಲ್ಲಾ ಹಿಂದಿನ ಸಚಿವರು ಕೂತ್ಕೊಳ್ತಾರೋ ಅಲ್ಲಿ ಮುಖ್ಯಮಂತ್ರಿ ಕೂತ್ಕೊಳ್ತಾರೋ ಆ ಬೋರ್ಡ್ ನಲ್ಲಿ ನಿಮ್ಮನ್ನ ಧ್ವನಿಯನ್ನ ಹಿಡಿಸುವಂತಹ ಶಕ್ತಿ ಕೊಟ್ಟಿದ್ದು ಶ್ರೀಮತಿ ಇಂದಿರಾ ಗಾಂಧಿಯವರು. ನೀವೆಲ್ಲ ಬರುತ್ತಾ ಇದ್ದೀರಿ. ಇವತ್ತು ನನ್ನ ಕರೆಸಿ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಕರೆಯಿಸಿ ಇವತ್ತು ಖಾಸಗೀಕರಣ ಆಗ್ತಾ ಇದೆ ಅದರ ವಿರುದ್ಧವಾಗಿ ನಿಮ್ಮ ಹೋರಾಟ ಚಳುವಳಿ ನಡೀತಾ ಇದೆ. ಯಾವಾಗ 2003 ರಲ್ಲಿ ಕಾನೂನು ಜಾರಿಗೆ ಬಂದಿತು ಯಾರು ತಂದಿದ್ದು ? ಬಿಜೆಪಿ ಸರ್ಕಾರದಲ್ಲಿ ಬಂತು ಆ ಸಂದರ್ಭದಲ್ಲಿ. ನೀವು ಯಾರಾದರೂ ಅದರ ವಿರುದ್ಧವಾಗಿ ಯಾರಾದರೂ ಮಾತಾಡಿದ್ದೀರಾ? ಯಾರು ನಿಮ್ಮವರು ಧ್ವನಿಯನ್ನು ಎತ್ತಲಿಲ್ಲ. ಯಾರು ಹೋರಾಟವನ್ನು ಮಾಡಲಿಲ್ಲ. ನೀವು ಯಾರು ಅವರಿಗೆ ಧಿಕ್ಕಾರ ಹೇಳಲಿಲ್ಲ. ನನ್ನ ಹತ್ತಿರ ಮಾತ್ರ ಬಂದು ಇಂಧನ ಸಚಿವ ಕೆ.ಜೆ. ಜಾರ್ಜ ಹತ್ತಿರ ಮಾತ್ರ ಬಂದು ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ, ಕೊಡಬೇಡಿ ಅಂತ ಹೇಳುತ್ತಾ ಇದ್ದೀರಿ. ನೀವು ಯಾವಾಗಲೂ ನನ್ನ ಜೊತೆ ಇರುತ್ತೇನ ಅಂತ ಹೇಳ್ತಾ ಇದ್ದೀರಿ.ಯಾರು ತಪ್ಪು ಮಾಡುತ್ತಾರೆ ಅವರಿಗೆ ಧಿಕ್ಕರ ಹೇಳಿದಾಗ ಯಾರು ಒಳ್ಳೇದು ಮಾಡುತ್ತಾರೆ ಅವರಿಗೆ ಜೈಕಾರ ಹೇಳಿದಾಗ ಮಾತ್ರ ಅದಕ್ಕೆ ಗೌರವ ಬರುತ್ತದೆ. ಇಲ್ಲ ಅಂದರೆ ಗೌರವ ಬರಲಿಕ್ಕೆ ಸಾಧ್ಯ ಇಲ್ಲ. ನೀವು ಯಾರ್ಯಾರು ಇಂಜಿನಿಯರ್ ಸಂಘದ ಅಧ್ಯಕ್ಷ ಬಸವಣ್ಣ, ನೀನಾಗಲಿ, 659 ನೌಕರರ ಸಂಘದ ಅಧ್ಯಕ್ಷ ಕೆ. ಬಲರಾಮ್ ಆಗಲಿ, ಈ ಹಿಂದೆ ಇದ್ದಂತಹ 2ನೇಪುಟಕ್ಕೆ

## ಸಿರವಾರದಲ್ಲಿ ಸಂಭ್ರಮದ 'ಕಾರಹುಣ್ಣಿಮೆ': ಕೃಷಿ ಸಂಸ್ಕೃತಿಯ ಅನಾವರಣ



ಧೈರ್ಯದ ದಾರಿ

**ಸಿರವಾರ, ಜೂನ್ 29:** ತಾಲೂಕಿನಾದ್ಯಂತ ರೈತರ ಅಚ್ಚುಮೆಚ್ಚಿನ ಹಬ್ಬವಾದ 'ಕಾರಹುಣ್ಣಿಮೆ'ಯನ್ನು ಇಂದು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಮುಂಗಾರು ಮಳೆಯ ಆಗಮನದ ಸಂಕೇತವಾಗಿ ಮತ್ತು ರೈತರ ಜೀವನಾಡಿಯಾದ ಎತ್ತುಗಳಿಗೆ ಕೃತಜ್ಞತೆ ಸಲ್ಲಿಸುವ ಈ ಹಬ್ಬವನ್ನು ರೈತರು ಅತ್ಯಂತ ಭಕ್ತಿಯಿಂದ ಆಚರಿಸಿದರು.

ಎತ್ತುಗಳ ಸಿಂಗಾರ ಮತ್ತು ಮೆರವಣಿಗೆ
ಹಬ್ಬದ ಅಂಗವಾಗಿ ರೈತರು ತಮ್ಮ ಎತ್ತು ಮತ್ತು ಹಸುಗಳಿಗೆ ಮೈ ತೊಳೆದು, ವಿಶೇಷವಾಗಿ ಸಿಂಗರಿಸಿದ್ದರು. ಎತ್ತುಗಳ ಕೊರಳಿಗೆ ಗೆಜ್ಜೆ, ತಲೆಗೆ ಹೂವಿನ ಗೊಂಡೆ, ಕೋಡಿಗೆ ಬಣ್ಣ, ಮೈಗೆ ಕೆಂಪು–ಹಳದಿ ಬಣ್ಣದ ಲೇಪನ ಹಾಗೂ ಬೆನ್ನಿಗೆ ಕಪ್ಪುದಾರವನ್ನು ಕಟ್ಟಿ ಸುಂದರವಾಗಿ ಅಲಂಕರಿಸಲಾಗಿತ್ತು.

ಪಟ್ಟಣದ ವಿದ್ಯಾನಗರದ ವಾರ್ಡ್ ನಂಬರ್ 19 ಮತ್ತು 20ರಿಂದ ಆರಂಭವಾದ ಈ ಭವ್ಯ ಮೆರವಣಿಗೆಯು, ಅಂಚೆ ಕಚೇರಿ ಹಾಗೂ ಬಯಲು ಆಂಜನೇಯ ದೇವಸ್ಥಾನದ ಮಾರ್ಗವಾಗಿ ಬಸವೇಶ್ವರ ವೃತ್ತಕ್ಕೆ ತಲುಪಿತು. ಅಲ್ಲಿ ಎತ್ತುಗಳಿಗೆ ವಿಶೇಷ ಪೂಜೆ ಸಲ್ಲಿಸಿ, ರೈತರು ಕೃತಜ್ಞತೆ ವ್ಯಕ್ತಪಡಿಸಿದರು.

ಸಂಪ್ರದಾಯದ 'ಕರಿ ಹರಿಯುವ' ಕಾರ್ಯಕ್ರಮ
ಸಂಜೆ ವೇಳೆಗೆ ರೈತರು ತಮ್ಮ ನೆಚ್ಚಿನ ಎತ್ತುಗಳನ್ನು ಕರೆದುಕೊಂಡು 'ಕರಿ ಹರಿಯುವ' ಸಾಂಪ್ರದಾಯಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ವಿಶಿಷ್ಟ ಆಚರಣೆಯು ಹಬ್ಬದ ಮೆರುಗನ್ನು ಹೆಚ್ಚಿಸಿತು.
ಈ ಸಂದರ್ಭದಲ್ಲಿ ನಿಂಬಯ್ಯಸ್ವಾಮಿ, ಪುರಸಭೆ ಸದಸ್ಯರ ಪತಿ ಮಲ್ಲಪ್ಪ, ರಾಮಯ್ಯ ಸೇರಿದಂತೆ ಹಲವು ಗಣ್ಯರು ಮತ್ತು ಅಪಾರ ಸಂಖ್ಯೆಯ ರೈತರು ಪಾಲ್ಗೊಂಡು ಹಬ್ಬದ ಸಂಭ್ರಮದಲ್ಲಿ ಮಿಂದೆದ್ದರು.

## ಜುಲೈ.1 ರಂದು ತಾಲೂಕಿನ ಚಿಕ್ಕಕೋಟ್ನೆಕಲ್ ಗ್ರಾಮದ ಹತ್ತಿರ ರಸ್ತೆ ತಡೆ ಪ್ರತಿಭಟನೆ: ಅಮೀನ್ ಪಾಷಾ ದಿದ್ದಿಗಿ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪತ್ರಿಕಾ ಭವನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅಮೀನ್ ಪಾಷಾ ದಿದ್ದಿಗಿ ಮಾತನಾಡಿ ತಾಲೂಕಿನಲ್ಲಿ ಜೋಳ ಬೆಳೆದ ರೈತರ ಖಾತೆಗೆ ಸರಕಾರದಿಂದ ಇದುವರೆಗೂ ಹಣ ಜಮಾ ಮಾಡದೆ ಇರುವುದರಿಂದ ಇಂದು ರೈತರು ಸಂಕಷ್ಟವನ್ನು ಎದುರಿಸುವಂತಾಗಿದೆ ಅದ್ದರಿಂದ ಕೂಡಲೇ ರೈತರ ಜೋಳದ ಹಣ ಜಮಾ ಮಾಡಬೇಕು ಹಾಗೂ ರೈತರಿಗೆ ಅಗತ್ಯ ರಸಗೊಬ್ಬರವನ್ನು ಅವಶ್ಯಕತೆಗೆ ಅನುಗುಣವಾಗಿ ಪೂರೈಕೆ ಮಾಡಬೇಕು ಹಾಗೂ ರೈತರ ಕೃಷಿಗೆ ಮಾರಕವಾದ ವಿದ್ಯುತ್ ಖಾಸಗಿಕರಣ ಮಾಡುವುದನ್ನು ವಿರೋಧಿಸಿ ಹಾಗೂ ಕೇಂದ್ರ ಸರಕಾರ ನರೇಗಾ ಯೋಜನೆಗೆ ಪರ್ಯಾಯವಾಗಿ ಗ್ರಾಮೀಣ ಭಾಗದ ರೈತ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡುವ ಯೋಜನೆಯಾದ ವಿ.ಬಿ. ಜೀ ರಾಮ ಜೀ ಯೋಜನೆಯನ್ನು ಜಾರಿಗೆ ತರಲ್ಲು ಉದ್ದೇಶಿಸಿದ್ದು ಈ ಯೋಜನೆಯಲ್ಲಿ ಕೂಲಿ ಕಾರ್ಮಿಕರ ಮಾನವ ದಿನಗಳನ್ನು ಕಡಿಮೆ ಮಾಡಲಾಗಿದು ಕೂಲಿ ಕಾರ್ಮಿಕರಿಗೆ ನಷ್ಟ ವಾಗುವುದರಿಂದ ಪರಿಶೀಲನೆ ಮಾಡಬೇಕು ಹಾಗೂ ರಾಜ್ಯದಲ್ಲಿ ಹಿಂಗಾರು ಮತ್ತು ಮುಂಗಾರು ವಿಫಲವಾಗಿದು ರಾಜ್ಯದಲ್ಲಿ ಬರಗಾಲ ಘೋಷಣೆ ಮಾಡಿ ರೈತರ ಸಾಲವನ್ನು ಮನ್ನಾ ಮಾಡಬೇಕು ಎಂದು ಒತ್ತಾಯಿಸಿ ಜುಲೈ.1 ರಂದು ತಾಲೂಕಿನ ಚಿಕ್ಕಕೋಟ್ನೆಕಲ್ ಗ್ರಾಮದ ಹತ್ತಿರ ಮುಖ್ಯ ರಸ್ತೆಯನ್ನು ಬಂದ್ ಮಾಡಿ ಸಾವಿರಾರು ರೈತರು ಪ್ರತಿಭಟನೆ ನಡೆಸಲಿದ್ದಾರೆ. ನಮ್ಮ ಬೇಡಿಕೆಗಳಿಗೆ ಸರಕಾರ ಸ್ಪಂದಿಸದೆ ಇದ್ದಲ್ಲಿ ಮುಂದಿನ ದಿನಗಳಲ್ಲಿ ಮಾನ್ವಿ ಬಂದ್‌ಗೆ ಕರೆ ನೀಡಲಾಗುವುದು ಎಂದು ತಿಳಿಸಿದರು.

ಕೆ.ವೈ.ಬಸವರಾಜ ನಾಯಕ, ಹೊಳೆಯಪ್ಪ ಉಟಗನೂರು,ಬಸವರಾಜ ಹಂಚಿನಾಳ್, ವೀರೇಶನಾಯಕ, ಉರುಕುಂದನಾಯಕ,ಹುಲಿಗಯ್ಯನಾಯಕ,ಬುಜ್ಜಿಗೌಡ,ಶಿವಪ್ಪ ಮ್ಯಾಗಿನಮನಿ,ಹನುಮಂತರಾಯ ಬಲ್ಲಟಗಿ, ರಾಜ, ಶ್ರೀಧರ ಕೋಟ್ನೆಕಲ್,ನಾಗರಾಜ ಬೋವಿ,ವಿರೇಶ ಸಂಗಪೂರ್ ಸೇರಿದಂತೆ ಇನ್ನಿತರರು ಇದ್ದರು.

## ಮತದಾರರಿಗೆ ಎನ್ಯೂಮರೇಶನ್ ಫಾರ್ಮ ನೀಡುವುದಕ್ಕೆ ಕ್ರಮ: ಭೀಮರಾಯ ಬಿ.ರಾಮಸಮುದ್ರ

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಸಮಗ್ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಭಾಗವಾಗಿ ಇಂದು ನಡೆದ ಮೊದಲನೇ ದಿನದ ಎನ್ಯೂಮರೇಶನ್ ಫಾರ್ಮ ವಿತರಣೆಯನ್ನು ಸಹಾಯಕ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ ಹಾಗೂ ರಾಯಚೂರು ಸಹಾಯಕ ವಿಭಾಗಾಧಿಕಾರಿ ಹಂಪ್ಪಣ್ಣ ಸಜ್ಜನ್ ಪರಿಶೀಲಿಸಿದರು.

ಇಂದು ಬೆಳಿಗ್ಗೆಯಿಂದಲೇ ಪಟ್ಟಣದಲ್ಲಿ ಮನೆ ಮನೆಗೆ ತೆರಳಿ ಬಿ.ಎಲ್.ಓ. ಅಧಿಕಾರಿಗಳು ಮತದಾರರಿಗೆ ಎನ್ಯೂಮರೇಶನ್ ಫಾರ್ಮ ವಿತರಣೆಯನ್ನು ಮಾಡಿ ತುಂಬಿದ ಫಾರ್ಮ ಅನ್ನು ಮರಳಿ ಪಡೆದು ಡಿಜಟಲೀಕರಣ ಗೊಳಿಸಿದರು.

ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರು ಮಾತನಾಡಿ ಮಾನ್ವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಾನ್ವಿ ಮತ್ತು ಸಿರವಾರ ತಾಲೂಕಿನಲ್ಲಿ 276 ಬೂತ್‌ಗಳಲ್ಲಿ ಒಟ್ಟು 2 ಲಕ್ಷ 45ಸಾವಿರ ಮತದಾರರಿಗೆ ಎನ್ಯೂಮರೇಶನ್ ಫಾರ್ಮ ನೀಡುವುದಕ್ಕೆ ಪ್ರತಿ ಬೂತ್‌ಗೆ ಒಬ್ಬರಂತೆ ಬಿ.ಎಲ್.ಓ. ಗಳನ್ನು ನೇಮಕ ಮಾಡಲಾಗಿದು 12 ಬಿ.ಎಲ್.ಓ.ಗಳಿಗೆ ಒಬ್ಬರಂತೆ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ .ಮಂಗಳವಾರ



ಮೊದಲದಿನ ಮತದಾರರಿಂದ ಉತ್ತಮ ಸ್ಪಂದನೆ ದೊರೆತ್ತಿದು ಬಿ.ಎಲ್.ಓ.ಗಳು 4,284 ಎನ್ಯೂಮರೇಶನ್ ಫಾರ್ಮ ವಿತರಿಸಿದ್ದು ಅವರಲ್ಲಿ 965 ಮತದಾರರು ಎನ್ಯೂಮರೇಶನ್ ಫಾರ್ಮ ಅನ್ನು ತುಂಬಿ ಮರಳಿ ನೀಡಿದ್ದಾರೆ ಸ್ವೀಕರಿಸಿದ ಎಲ್ಲಾ ಎನ್ಯೂಮರೇಶನ್ ಫಾರ್ಮಗಳನ್ನು ಡೀಜಟಲಿಕರಣ ಕೂಡ ಮಾಡಲಾಗಿದೆ ಎಂದು ತಿಳಿಸಿದರು.

ಬಿ.ಎಲ್.ಓ.ಮೇಲ್ವಿಚಾರಕರಾದ ಆಂಜನೇಯ್ಯ ,ಕ್ಯಾಮಿನಾಯಕ ಹಾಗೂ ಬಿ.ಎಲ್.ಓ.ಗಳು ಇದ್ದರು.

## ತಾಲೂಕು ಅಡಳಿದಿಂದ ಎನ್ಯೂಮರೇಶನ್ ಫಾರ್ಮ ವಿತರಣೆಗೆ ಚಾಲನೆ

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದಲ್ಲಿ ಸಮಗ್ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಭಾಗವಾಗಿ ಇಂದು ಮೊದಲನೇ ದಿನ ಎನ್ಯೂಮರೇಶನ್ ಫಾರ್ಮ ಅನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರು ಕಲ್ಮಠದಲ್ಲಿ ಶ್ರೀ ವಿರೂಪಾಕ್ಷ ಶಿವಾಚಾರ್ಯ ಮಹಾಸ್ವಾಮಿಗಳಿಗೆ ವಿತರಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ಮಾನ್ವಿ ತಾಲೂಕಿನ ಅರ್ಹ ಮತದಾರರ ಮನೆಗಳಿಗೆ ಅಧಿಕಾರಿಗಳು ಹಾಗೂ ಬಿ.ಎಲ್.ಒ.ಗಳು ಎನ್ಯೂಮರೇಶನ್ ಫಾರ್ಮ ಅನ್ನು ದ್ವೀಪ್ರತಿಯಲ್ಲಿ ವಿತರಿಸಲಿದ್ದಾರೆ 30 ದಿನಗಳ ಕಾಲವಕಾಶವಿದ್ದು ಮತದಾರರು ತಮ್ಮ ಅಗತ್ಯ ಸೂಕ್ತ ದಾಖಲೆಗಳೊಂದಿಗೆ ಸರಿಯಾದ ಮಾಹಿತಿಯೊಂದಿಗೆ ತುಂಬಿ ನೀಡಿದಲ್ಲಿ ಮಾತ್ರ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಸೇರ್ಪಡೆಗೊಳ್ಳಲಿದೆ ಎಂದು ತಿಳಿಸಿದರು.



ಶಾಸಕ ಹಂಪಯ್ಯನಾಯಕ, ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಸೇರಿದಂತೆ ಪಟ್ಟಣದಲ್ಲಿನ ವಿವಿಧ ಧಾರ್ಮಗಳ ಗುರುಗಳಿಗೆ ಎನ್ಯೂಮರೇಶನ್ ಫಾರ್ಮಅನ್ನು ವಿತರಿಸುವ ಮೂಲಕ ಚಾಲನೆ ನೀಡಲಾಯಿತು.

## ಸಿರವಾರ: ಮನೆಬಾಗಿಲಿಗೆ ಬರಲಿದ್ದಾರೆ ಬಿಎಲ್‌ಒ; ಮತದಾರರ ಪಟ್ಟಿ ಪರಿಷ್ಕರಣೆಗೆ ಸಹಕರಿಸಿ: ತಹಸಿಲ್ದರಾದ ಅಶೋಕ್ ಪವಾರ್

ಧೈರ್ಯದ ದಾರಿ

**ಸಿರವಾರ:** ಪಟ್ಟಣದಲ್ಲಿಂದು ಆಯೋಜಿಸಲಾಗಿದ್ದ 'ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನ'ಕ್ಕೆ ತಾಲೂಕು ದಂಡಾಧಿಕಾರಿ (ತಹಸೀಲ್ದಾರ್) ಅಶೋಕ್ ಪವರ್ ಹಾಗೂ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ ಅವರು ಚಾಲನೆ ನೀಡಿದರು.

**ಸಾರ್ವಜನಿಕರಿಗೆ ತಹಸೀಲ್ದಾರ್ ಕರೆ:** ಕಾರ್ಯಕ್ರಮದಲ್ಲಿ ಮಾತನಾಡಿದ ತಹಸೀಲ್ದಾರ್ ಅಶೋಕ್ ಪವರ್, "ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಖಖಖ) ಅಭಿಯಾನದ ಉದ್ದೇಶವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು. ಮತದಾರರ ಪಟ್ಟಿಯಲ್ಲಿರುವ ಹೆಸರು, ವಿಳಾಸ ಮತ್ತು ಜನ್ಮ ದಿನಾಂಕಗಳಲ್ಲಿನ ತಪ್ಪುಗಳನ್ನು ಸರಿಪಡಿಸಲು ಇದು ಸುವರ್ಣಾವಕಾಶ. 18 ವರ್ಷ ಪೂರ್ಣಗೊಳಿಸಿದ ಯುವಕ–ಯುವತಿಯರು ಹೊಸದಾಗಿ ಮತದಾರರ ಗುರುತಿನ ಚೀಟಿ ಪಡೆಯಲು ಅರ್ಜಿ ಸಲ್ಲಿಸಬಹುದು. ಅರ್ಹರು ತಮ್ಮ ವಯಸ್ಸು ಮತ್ತು ವಿಳಾಸದ ದೃಢೀಕರಣಕ್ಕಾಗಿ ಅಗತ್ಯ ದಾಖಲೆಗಳೊಂದಿಗೆ ಬಂದು ಈ ಪ್ರಕ್ರಿಯೆಯನ್ನು ಸುಗಮಗೊಳಿಸಬೇಕು" ಎಂದು ಮನವಿ ಮಾಡಿದರು.

**ಬಿಎಲ್‌ಒ (BLO) ಸಹಕಾರಕ್ಕೆ ಮನವಿ:** ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ ಅವರು ಮಾತನಾಡುತ್ತಾ, "ಪ್ರತಿ ವಾರ್ಡ್‌ಗೂ



ಒಬ್ಬರಂತೆ ಬಿಎಲ್‌ಒ (BLO) ಅವರನ್ನು ನೇಮಕ ಮಾಡಲಾಗಿದೆ. ಬಿಎಲ್‌ಒಗಳು ನಿಮ್ಮ ಮನೆಗೆ ಭೇಟಿ ನೀಡಿದಾಗ, ಅವರಿಗೆ ಸೂಕ್ತ ಮಾಹಿತಿ ನೀಡಿ ಸಹಕರಿಸಿ. ಮತದಾರರ ಪಟ್ಟಿಯಲ್ಲಿ ಹೆಸರು, ಜನ್ಮ ದಿನಾಂಕ ಅಥವಾ ವಿಳಾಸದಲ್ಲಿ ವ್ಯತ್ಯಾಸಗಳಿದ್ದರೆ ಅದನ್ನು ಗಮನಕ್ಕೆ ತನ್ನಿ. ಅಲ್ಲದೆ, ಮೃತಪಟ್ಟ ವ್ಯಕ್ತಿಗಳ ಹೆಸರನ್ನು ಪಟ್ಟಿಯಿಂದ ಕೈಬಿಡಲು ಸರಿಯಾದ ಮಾಹಿತಿ ನೀಡುವ ಮೂಲಕ ಮತದಾರರ ಪಟ್ಟಿಯನ್ನು ದೋಷರಹಿತವಾಗಿಸಲು ಸಹಕರಿಸಬೇಕು" ಎಂದು ಸಾರ್ವಜನಿಕರಲ್ಲಿ ವಿನಂತಿಸಿದರು. ಈ ಸಂದರ್ಭದಲ್ಲಿ ಆರ್‌ಐ ಶ್ರೀನಾಥ್, ಗ್ರಾಮ ಲೆಕ್ಕಾಧಿಕಾರಿ ವಿಲ್ಸನ್, ಅಮರೇಶ್ ಉಪ್ಪಾರ್, ಶಿಕ್ಷಕ ಚೆನ್ನವೀರಯ್ಯ ಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಗಿಲ್ಲೇಸೂಗೂರು ಕುರುಬರ ರಾಮಪ್ಪ ಜೋಡೆತ್ತುಗಳಿಂದ ಚಾಲನೆ.



ಧೈರ್ಯದ ದಾರಿ

ಮಂಗಳವಾರ. ಗಿಲ್ಲೆಸೂಗುರು ಗ್ರಾಮದಲ್ಲಿ ಕಾರಹುಣ್ಣಿಮೆಯ ಅಂಗವಾಗಿ ರೈತರ ಎತ್ತುಗಳ ಬಂಡೆ ಎಳೆಯುವ ಸ್ಪರ್ಧೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ..

ಬಾರದ ಕಲ್ಲುದಿಂಡು ಎಳೆಯುವ ಸ್ಪರ್ಧೆ ಕಾರ್ಯಕ್ರಮ ವಿವಿಧ ಗ್ರಾಮದ ರೈತರ ಜೋಡೆತ್ತುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಈ ಸಂದರ್ಭದಲ್ಲಿ ಸಕಲ ರೈತ ಬಂಧುಗಳು ಮತ್ತು ಸುತ್ತಮುತ್ತಲಿನ ಹಳ್ಳಿ ಹಳ್ಳಿಯಿಂದ ಬಂದಂತಹ ರೈತ ಬಂಧುಗಳು ಭಾಗವಹಿಸಿದ್ದರು

ಈ ಸಂದರ್ಭದಲ್ಲಿ ಗ್ರಾಮಸ್ಥರು ಗಿಲ್ಕ ನಾಗೇಶ್ ನಾಯಕ. ಆಲೂರು ಮಲ್ಲೇಶ್ ನಾಯಕ. ಗುರುಸ್ವಾಮಿ ನಾಯಕ. ಕೂಡ್ಲೂರು ನರಸಿಂಹ ನಾಯಕ. ಪಿ.ಹನುಮೇಶ ನಾಯಕ. ಹನುಮಂತುಬಿಜೆಪಿ. ಆರ್ ನರಸಿಂಹ ನಾಯಕ. ನಲ್ಲಾರೆಡ್ಡಿ ನಾಯಕ. ಜಗನಾಥ್ ಗಿಲ್ಕ ಬಡೇಸಾಬ್. ಗಿಲ್ಕ ಬುಡ್ಡ ಭೀಮೇಶ ಗ್ರಾಮಸ್ಥರಿಂದ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಅವರಣದಲ್ಲಿ ಬಹುಮಾನ ವಿತರಣೆ ಕಾರ್ಯಕ್ರಮ.

ಪ್ರಥಮ ಬಹುಮಾನ. ವೀರೇಶ್ ನಾಯಕ ಜಾಲಿಬೆಂಚಿ ಗ್ರಾಮ

ದ್ವಿತೀಯ ಬಹುಮಾನ. ಹನುಮಂತ ನಾಯಕ ಕರೆಬೋದುರು. ಗ್ರಾಮ

ತೃತೀಯ ಬಹುಮಾನ. ಗಿಲ್ಕ ಭೀಮಣ್ಣ ನಾಯಕ. ಇವರುಗಳಿಗೆ ಬಹುಮಾನ ವಿತರಣೆ ಈ ಕಾರ್ಯಕ್ರಮವನ್ನು ಊರಿನ ಯುವಕರು ಮತ್ತು ರೈತರಿಂದ ನೆರವೇರಿಸಲಾಯಿತು.

# ತಾಲೂಕು ಅಡಳಿದಿಂದ ಎನ್ಯೂಮರೇಶನ್ ಫಾರ್ಮ ವಿತರಣೆಗೆ ಚಾಲನೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದಲ್ಲಿ ಸಮಗ್ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಭಾಗವಾಗಿ ಇಂದು ಮೊದಲನೇ ದಿನ ಎನ್ಯೂಮರೇಶನ್ ಫಾರ್ಮ ಅನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರು ಕಲ್ಮಠದಲ್ಲಿ ಶ್ರೀ ವಿರೂಪಾಕ್ಷ ಶಿವಾಚಾರ್ಯ ಮಹಾಸ್ವಾಮಿಗಳಿಗೆ ವಿತರಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ಮಾನ್ವಿ ತಾಲೂಕಿನ ಅರ್ಹ ಮತದಾರರ ಮನೆಗಳಿಗೆ ಅಧಿಕಾರಿಗಳು ಹಾಗೂ ಬಿ.ಎಲ್.ಒ.ಗಳು ಎನ್ಯೂಮರೇಶನ್ ಫಾರ್ಮ ಅನ್ನು ದ್ವೀಪ್ರತಿಯಲ್ಲಿ ವಿತರಿಸಲಿದ್ದಾರೆ 30 ದಿನಗಳ ಕಾಲವಕಾಶವಿದ್ದು ಮತದಾರರು ತಮ್ಮ ಅಗತ್ಯ ಸೂಕ್ತ ದಾಖಲೆಗಳೊಂದಿಗೆ ಸರಿಯಾದ ಮಾಹಿತಿಯೊಂದಿಗೆ ತುಂಬಿ ನೀಡಿದಲ್ಲಿ ಮಾತ್ರ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಸೇರ್ಪಡೆಗೊಳ್ಳಲಿದೆ ಎಂದು ತಿಳಿಸಿದರು.

ಶಾಸಕ ಹಂಪಯ್ಯನಾಯಕ, ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಸೇರಿದಂತೆ ಪಟ್ಟಣದಲ್ಲಿನ ವಿವಿಧ ಧಾರ್ಮಗಳ ಗುರುಗಳಿಗೆ ಎನ್ಯೂಮರೇಶನ್ ಫಾರ್ಮಅನ್ನು ವಿತರಿಸುವ ಮೂಲಕ ಚಾಲನೆ ನೀಡಲಾಯಿತು.

# ಕಾರ್ಮಿಕ ಇಲಾಖೆಯಿಂದ ಶೈಕ್ಷಣಿಕ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

**ರಾಯಚೂರು ಜೂನ್ 30:** ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವಂತಿಕೆ ಪಾವತಿಸುವ ಸಂಘಟಿತ ಕಾರ್ಮಿಕರ ಮಕ್ಕಳಿಂದ ಪ್ರೌಢ ಶಾಲೆಯಿಂದ ಸ್ನಾತಕೋತ್ತರ ಪದವಿಯವರೆಗೆ ಹಾಗೂ ವೈದ್ಯಕೀಯ ಅಥವಾ ಇಂಜಿನಿಯರಿಂಗ್‌ನಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ 2026–27ನೇ ಸಾಲಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕೆ ಆನ್‌ಲೈನ್ ಮುಖಂತರ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಕಾರ್ಮಿಕನ ಮಾಸಿಕ ವೇತನ 35,000ರೂ.ಗಿಂತ ಮೀರಿರಬಾರದು. ಒಂದು ಕುಟುಂಬದಲ್ಲಿ ಇಬ್ಬರು ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು.

ಶೈಕ್ಷಣಿಕ ಪ್ರೀತ್ಸಾಹ ಧನ ಸಹಾಯ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವೆಬ್ ಸೆಟ್ ವಿಳಾಸ: ತಿತಿತಿ.ಇಟತಿಛಿಠಿಥಿ.ಇಚಿಡಿಟಿಚಿಣಚಿಞಚಿ.ರಠತ.ಎಟ ನಲ್ಲಿ 2026ರ ಡಿಸೆಂಬರ್ 31ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಯು ಹಿಂದಿನ ವರ್ಷದಲ್ಲಿ ಸಾಮಾನ್ಯ ವರ್ಗ ಶೇ.50 ಪ.ಜಾ/ಪ.ಪಂ.45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ.48, 1ನೇ & 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಸವಂತಪುರ, ಬೆಂಗಳೂರು–560022 ಇಲ್ಲಿಗೆ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080–23475188, 8277291175, 8277120505, 9141585402, 914160256ಗೆ ಸಂಪರ್ಕಿಸಬಹುದಾಗಿದೆ ಎಂದು ರಾಯಚೂರು ಜಿಲ್ಲೆಯ ಕಾರ್ಮಿಕ ಅಧಿಕಾರಿ ಆರತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಕಲಚೇತನ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ರಾಯಚೂರು ಜೂನ್ 30:** ರಾಯಚೂರು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ಪ್ರೀ–ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಂದ ಎಸ್‌ಎಸ್‌ಪಿನಲ್ಲಿ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ಕಡ್ಡಾಯವಾಗಿ ಯು.ಡಿ.ಐ.ಡಿ. ವಿಶಿಷ್ಠ ಗುರುತಿನ ಚೀಟಿ ಪಡೆದಿರುವ ವಿಕಲಚೇತನ ವಿದ್ಯಾರ್ಥಿಗಳು ಸೂಕ್ತ ದಾಖಲಾತಿಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ವಿಕಲಚೇತನ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಸ್ವೀಕೃತಿಯೊಂದಿಗೆ ಹಾರ್ಡ್ ಪ್ರತಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಕಟ್ಟಡ ಮ.ನಂ:–1–3–1411/4 ಆಶಾಪೂರು ರಸ್ತೆ, ಆಫೀರ್ಸ್ ಕಾಲೋನಿ ಎದುರುಗಡೆ ಶ್ರೀ ರಾಜಾಮಾತಾ ದೇವಸ್ಥಾನ ಹತ್ತಿರ, ರಾಯಚೂರು ಕಚೇರಿಗೆ ಅಥವಾ ಆಯಾ ತಾಲ್ಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಹಾಗೂ ನಗರ ಪ್ರದೇಶದಲ್ಲಿ ಇರುವ ವಿದ್ಯಾರ್ಥಿಗಳು ನಗರ ಪುನರ್ವಸತಿ ಕಾರ್ಯಕತರಿಗೆ ನಿಗದಿಪಡಿಸಿದ ದಾಖಲಾತಿಗಳೊಂದಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–200992ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಯಚೂರು ರಿಪೋರ್ಟರ್ಸ್ ಗಿಲ್ಡ್ ರಾಜ್ಯಮಟ್ಟದ ಕಥೆ, ಕವನ ಸ್ಪರ್ಧೆ ಫಲಿತಾಂಶ ಪ್ರಕಟ

### – ಕಥಾ ವಿಭಾಗದಲ್ಲಿ ಕೆ.ಪಿ.ಓಂಕಾರಮೂರ್ತಿ ಅವರ 'ಡೆಡ್‌ಲೈನ್'ಗೆ ಪ್ರಥಮ ಸ್ಥಾನ
### – ಕವನ ವಿಭಾಗದಲ್ಲಿ ಶ್ರೀನಿವಾಸ ಎಂ ಅವರ 'ಮುಸ್ಸಂಜೆಯ ಕಥೆಗಳು' ಪ್ರಥಮ



ಧೈರ್ಯದ ದಾರಿ

**ರಾಯಚೂರು, ಜೂ.30:** ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ಪತ್ರಕರ್ತರ ರಾಜ್ಯ ಮಟ್ಟದ ಕಥೆ, ಕವನ ಸ್ಪರ್ಧೆಯ ಫಲಿತಾಂಶ ಬಂದಿದ್ದು ರಾಯಚೂರು ಜಿಲ್ಲೆಯ ನಾಲ್ವರು ಸೇರಿ ರಾಜ್ಯದ ವಿವಿಧ ಜಿಲ್ಲೆಗಳ ಪತ್ರಕರ್ತರ ಅತ್ಯುತ್ತಮ ಕಥೆ, ಕವನಗಳು ಬಹುಮಾನ ಪಡೆದಿವೆ ಎಂದು ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯ್ ಜಾಗಟಗಲ್ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿ, ಕಥಾ ಸ್ಪರ್ಧೆಯಲ್ಲಿ ಚಿತ್ರದುರ್ಗದ ಪ್ರಜಾವಾಣಿಯ ಸಹಾಯಕ ವರದಿಗಾರ ಕೆ.ಪಿ.ಓಂಕಾರಮೂರ್ತಿ ಅವರ 'ಡೆಡ್‌ಲೈನ್' ಕಥೆಗೆ ಪ್ರಥಮ, ದಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಮೈಸೂರು ವಿಶೇಷ ವರದಿಗಾರ ಶ್ರೀನಿವಾಸ ಎಂ ಅವರ 'ನಿಧನ ವಾರ್ತೆ' ಕಥೆಗೆ ದ್ವಿತೀಯ , ಉದಯವಾಣಿ ಪತ್ರಿಕೆಯ ರಾಯಚೂರು ಜಿಲ್ಲಾ ಹಿರಿಯ ವರದಿಗಾರ ಸಿದ್ದಯ್ಯಸ್ವಾಮಿ ಕುಕನೂರು ಅವರ 'ಪ್ರೆಸಿಡೆಂಟ್ ಶಂಕ್ರ' ಕಥೆ ತೃತೀಯ ಸ್ಥಾನ ಪಡೆದಿದೆ. ಅಲ್ಲದೆ, ಪ್ರಜಾವಾಣಿಯ ಮುದಗಲ್ ವರದಿಗಾರ ಡಾ.ಶರಣಪ್ಪ ಆನಾಹೊಸೂರ ಅವರ 'ನಮ್ಮ ಹುಡ್ರು', ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ರಾಯಚೂರು ಜಿಲ್ಲಾ ವರದಿಗಾರ ಬಸವರಾಜ ಭೋಗಾವತಿ ಅವರ 'ಕಪ್ಪು ಬಣ್ಣದ ಬೂಟು' , ಉದಯವಾಣಿ ದಕ್ಷಿಣ ಕನ್ನಡದ ಮಣಿಪಾಲ ಆವೃತ್ತಿ ಹಿರಿಯ ಉಪಸಂಪಾದಕ ಅನಿಲ್ ಕುಮಾರ ಕೈರಂಗಳ ಅವರ 'ಹಪ್ಪಳ ಸ್ವಾಮಿ' ಕಥೆ ತೀರ್ಪುಗಾರರ ಮೆಚ್ಚುಗೆ ಪಡೆದಿವೆ ಎಂದರು.

ಇನ್ನೂ ಕವನಗಳ ವಿಭಾಗದಲ್ಲಿ ದಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಮೈಸೂರು ವಿಶೇಷ ವರದಿಗಾರ ಶ್ರೀನಿವಾಸ ಎಂ. ಅವರ ಮುಸ್ಸಂಜೆಯ ಕಥೆಗಳು ಪ್ರಥಮ, ಬೆಂಗಳೂರಿನ ಹಿರಿಯ ಪತ್ರಕರ್ತರು,ಅಂಕಣಕಾರರಾದ ಶಂಕರ ಪಾಗೋಜಿ ಅವರ 'ಧರ್ಮ ದಳ್ಳುರಿ' ಹಾಗೂ ಬಿಟಿವಿ ರಾಯಚೂರು ಜಿಲ್ಲಾ ವರದಿಗಾರ ಚಂದಪ್ಪ ದೊರನಹಳ್ಳಿ ಅವರ "ಹೆತ್ತ 'ವನ' ಸೆರಗಿನ ಚಪ್ಪರ " ಕವನಗಳು ಜಂಟಿಯಾಗಿ ದ್ವಿತೀಯ ಸ್ಥಾನ ಪಡೆದರೆ, ಯಲಬುರ್ಗಾ ತಾಲೂಕು ವರದಿಗಾರ ಉಮಾಶಂಕರ ಹಿರೇಮಠ ಅವರ 'ಅಂಧ ಭಕ್ತರು' ಕವನ ತೃತೀಯ ಸ್ಥಾನ ಪಡೆದಿದೆ. ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕು ವರದಿಗಾರ ಭೀಮಸೇನರಾವ್ ಕೆ. ಕುಲಕರ್ಣಿ ವಜ್ಜಲ್ ಅವರ 'ನಾಡದೇವಿ ನಿನ್ನ ನೆನೆದು' ಕವನ, ದಕ್ಷಿಣ ಕನ್ನಡದ ಹಿರಿಯ ಉಪ ಸಂಪಾದಕ ಅನಿಲ್‌ಕುಮಾರ ಕೈರಂಗಳ ಅವರ 'ಭಾವುಕರಾಗುವ ಮುನ್ನ' ಕವನ, ದಾವಣಗೆರೆ ಜಿಲ್ಲೆಯ ಹಿರಿಯ ವರದಿಗಾರ ಬಸವರಾಜ ಕೆ.ಜಿ ಅವರ 'ಸಾವೇ ಇಲ್ಲದ ಪ್ರೀತಿಗಾಗಿ 'ಕವನಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ ಎಂದು ಹೇಳಿದರು.

ಕಥೆಗಳ ತೀರ್ಪುಗಾರರಾಗಿ ಖ್ಯಾತ ಕಥೆಗಾರರಾದ ಮಹಾಂತೇಶ ನವಲಕಲ್, ಕವನ ಸ್ಪರ್ಧೆ ತೀರ್ಪುಗಾರರಾಗಿ ಹಿರಿಯ ಪತ್ರಕರ್ತ, ಕವಿಗಳಾದ ತುರುವೀಹಾಳ ಚಂದ್ರು ಜವಾಬ್ದಾರಿ ನಿರ್ವಹಿಸಿದ್ದು, ಅವರಿಗೆ ಗಿಲ್ಡ್ ನಿಂದ ಈ ಮೂಲಕ ಧನ್ಯವಾದಗಳನ್ನ ಅರ್ಪಿಸುತ್ತೇವೆ ಎಂದರು.

ಕಥಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರಿಗೆ 10 ಸಾವಿರ ರೂ, ದ್ವಿತೀಯ ಸ್ಥಾನಕ್ಕೆ 7 ಸಾವಿರ ರೂ , ತೃತೀಯ ಸ್ಥಾನದ ವಿಜೇತರಿಗೆ 3 ಸಾವಿರ ರೂ ನಗದು ಬಹುಮಾನ ಹಾಗೂ ಕವನ ಸ್ಪರ್ಧೆಯ ಪ್ರಥಮ ಬಹುಮಾನ 5 ಸಾವಿರ ರೂ., ದ್ವಿತಿಯ 3 ಸಾವಿರ ರೂ, ತೃತೀಯ ಸ್ಥಾನ ಪಡೆದವರಿಗೆ 2 ಸಾವಿರ ರೂ. ಬಹುಮಾನ ನೀಡಲಾಗುವುದು. ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ ಹಾಗೂ ಕವನಗಳಿಗೆ 1 ಸಾವಿರ ರೂಪಾಯಿ ಸಮಾಧಾನಕರ ಬಹುಮಾನ ನೀಡಲಾಗುತ್ತಿದೆ ಅಂತ ತಿಳಿಸಿದರು.

ಸ್ಪರ್ಧಾ ವಿಜೇತರಿಗೆ ಆಗಸ್ಟ್ ಕೊನೆ ವಾರದಲ್ಲಿ ಹಮ್ಮಿಕೊಂಡಿರುವ ಬೆಳ್ಳಿ ಮಹೋತ್ಸವ ಸಮಾರಂಭದಲ್ಲಿ ಬಹುಮಾನ ನೀಡಿ ಗೌರವಿಸಲಾಗುವುದು. ಬಹುಮಾನಕ್ಕೆ ಆಯ್ಕೆಯಾದ ಕಥೆ, ಕವನಗಳ ಜೊತೆಗೆ ತೀರ್ಪುಗಾರರ ಗಮನ ಸೆಳೆದ ಇನ್ನಿತರ ಕಥೆ ಕವನಗಳನ್ನು ಪುಸ್ತಕ ರೂಪದಲ್ಲಿ ಹೊರ ತರಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಹೂಗಾರ, ಜಂಟಿ ಕಾರ್ಯದರ್ಶಿ ಶ್ರೀಕಾಂತ ಸಾವೂರು, ಸದಸ್ಯರಾದ ಚನ್ನಬಸವ ಬಾಗಲವಾಡ, ಖಾನ್‌ಸಾಬ್ ಮೋಮಿನ್, ಆನಂದ ವಿ.ಕೆ., ಇತರರಿದ್ದರು.

## ಕೋವಿಡ್ ಸಮಯದಲ್ಲಿ ಸಾವಿರಾರು ಜನರ ಹಸಿವು ನೀಗಿಸಿದ ಸಾದಿಕ್ ಖಾನ್ ಸೇವೆ ಮಾದರಿ: ಸಾಯಿ ಕಿರಣ್ ಆದೋನಿ ಗುರೂಜಿ



ಧೈರ್ಯದ ದಾರಿ



**ರಾಯಚೂರು,ಜೂ.29–** ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು ಹಾಗೂ ಅವರೊಂದಿಗೆ ಇದ್ದ ಸಂಬಂಧಿಕರಿಗೆ ಡಾ. ಪುನೀತ್ ರಾಜಕುಮಾರ್ (ಅಪ್ಪು) ಚಾರಿಟೇಬಲ್ ಟ್ರಸ್ಟ್, ರಾಯಚೂರು ಹಾಗೂ ಪ್ರಕೃತಿ ಹೋಂಸ್ ಡೆವಲಪರ್ಸ್ ವತಿಯಿಂದ ಸುಮಾರು ಸಾವಿರಕ್ಕೂ ಹೆಚ್ಚು ಜನರಿಗೆ ಮೃಷ್ಟಾನ್ನ ಭೋಜನ ಏರ್ಪಡಿಸಲಾಯಿತು.

ಚಿತ್ರಾನ್ನ, ಕರಿಬೇವು ರೈಸ್, ಬಿಳಿ ಅನ್ನ, ಸಾಂಬಾರ್, ಬಜ್ಜಿ, ಅಪ್ಪಳ ಹಾಗೂ ಬಾಳೆಹಣ್ಣು ಒಳಗೊಂಡ ಮದುವೆ ಸಮಾರಂಭಗಳ ಮಾದರಿಯ ಸಾಂಪ್ರದಾಯಿಕ ಭೋಜನವನ್ನು ಅತ್ಯಂತ ಅಚ್ಚುಕಟ್ಟಾಗಿ ಸಿದ್ಧಪಡಿಸಿ ರೋಗಿಗಳು ಹಾಗೂ ಅವರೊಂದಿಗೆ ಇದ್ದ ಸಂಬಂಧಿಕರಿಗೆ ವಿತರಿಸಲಾಯಿತು.

ಕಾರ್ಯಕ್ರಮವನ್ನು ಶ್ರೀ ಸಾಯಿ ಕಿರಣ್ ಆದೋನಿ ಗುರೂಜಿ ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಕೆ. ಅಸ್ಲಾಂ ಪಾಶಾ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಸಾಯಿ ಕಿರಣ್ ಆದೋನಿ ಗುರೂಜಿ, ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಸಾವಿರಾರು ನಿರ್ಗತಿಕರು, ಬಡವರು ಹಾಗೂ ಅಗತ್ಯವಿದ್ದವರಿಗೆ ನಿರಂತರವಾಗಿ ಆಹಾರ ವಿತರಣೆ ಮಾಡುವ ಮೂಲಕ ಸಾದಿಕ್ ಖಾನ್ ಅವರು ಮಾನವೀಯ ಸೇವೆಯ ಅಪರೂಪದ ಮಾದರಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ಸಾಮಾನ್ಯವಾಗಿ ಸಿನಿಮಾ ನಟರ ಮೇಲಿನ ಅಭಿಮಾನವು ಅವರ ಚಿತ್ರಗಳನ್ನು ನೋಡುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆದರೆ ಡಾ. ಪುನೀತ್ ರಾಜಕುಮಾರ್ ಅವರ ಹೆಸರಿನಲ್ಲಿ ನಿರಂತರ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಕೇವಲ ಅಭಿಮಾನವಲ್ಲ, ಅದು ನಿಸ್ವಾರ್ಥ ಸೇವೆಯ ಪ್ರತೀಕವಾಗಿದೆ ಎಂದು ಅವರು ಹೇಳಿದರು.

ರಿಮ್ಸ್ ಆಸ್ಪತ್ರೆಯಲ್ಲಿ ರೋಗಿಗಳು ಹಾಗೂ ಅವರ ಸಂಬಂಧಿಕರಿಗೆ ಮದುವೆ ಸಮಾರಂಭಗಳಲ್ಲಿ ಬಡಿಸುವ ರೀತಿಯ ಮೃಷ್ಟಾನ್ನ ಭೋಜನವನ್ನು ಪ್ರೀತಿಯಿಂದ ಬಡಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದ್ದು, ಇಂತಹ ಸೇವೆಗಳು ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಬಲಪಡಿಸುವುದರ ಜೊತೆಗೆ ಯುವಜನತೆಗೆ ಪ್ರೇರಣೆಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಭಗವಂತನಲ್ಲಿ ಲೀನರಾಗಿರುವ ಡಾ. ಪುನೀತ್ ರಾಜಕುಮಾರ್ ಅವರ ಆಶೀರ್ವಾದ ಇಂತಹ ಸಮಾಜಮುಖಿ ಕಾರ್ಯಗಳಿಗೆ ಸದಾ ಇರುತ್ತದೆ ಎಂಬ ನಂಬಿಕೆ ವ್ಯಕ್ತಪಡಿಸಿದ ಅವರು, ರಾಜ್ಯದಾದ್ಯಂತ ಅಭಿಮಾನಿಗಳು ಸಾದಿಕ್ ಖಾನ್ ಅವರಂತಹ ಸಮಾಜಸೇವಕರಿಂದ ಪ್ರೇರಣೆ ಪಡೆದು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಡಾ. ಪುನೀತ್ ರಾಜಕುಮಾರ್ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸಾದಿಕ್ ಖಾನ್ ನೇತೃತ್ವದಲ್ಲಿ ಕಳೆದ ಆರು ವರ್ಷಗಳಿಂದ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಪ್ರತಿ ತಿಂಗಳು ರಿಮ್ಸ್ ಆಸ್ಪತ್ರೆಯಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಈ ಸಂದರ್ಭದಲ್ಲಿ ಪ್ರಕೃತಿ ಹೋಂಸ್ ಡೆವಲಪರ್ಸ್ ವ್ಯವಸ್ಥಾಪಕ ನಿರ್ದೇಶಕ ರಾಜಶೇಖರ್ ರೆಡ್ಡಿ, ಮಹಮ್ಮದ್ ರಿಯಾಜ್, ನದೀನ್ ಯರಗೇರ, ಮುಬೀನ್, ಫೇರೋಜ್ ಅಹ್ಮದ್, ಫಾರೂಕ್ ಹುಸೇನ್, ಉಸ್ಮಾನ್, ಅಜ್ಜು, ಹೊಸೂರು ಬಸವರಾಜ್, ಹೊಸೂರು ನಾಸೀರ್, ವಿಕಾಸ್, ಸಾಗರ್, ಮೌಲಾ, ರೆಡಮ್ಮ, ಮೈಬೂಬ್, ರೆಹನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಚ್ಚಾ ತೈಲ ದರ 72 ಡಾಲರ್ ಗೆ ಇಳಿಕೆ

**ವಾಷಿಂಗ್ಟನ್,ಜೂ,30–** ಇರಾನ್– ಅಮೆರಿಕ ನಡುವೆ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಅಂತಿಮ ಮಾತುಕತೆಗೆ ಎದುರು ನೋಡುತ್ತಿರುವ ಸಮಯದಲ್ಲಿ ಬ್ರೆಂಟ್ ಕಚ್ಚಾ ತೈಲ ಬ್ಯಾರೆಲ್‌ಗೆ 72 ಡಾಲರ್ ಗೆ ಇಳಿಕೆಯಾಗಿದೆ.

ದೋಹಾದಲ್ಲಿ ಸಂಭಾವ್ಯ ಅಮೆರಿಕ–ಇರಾನ್ ಮಾತುಕತೆಗಳ ಫಲಿತಾಂಶಕ್ಕಾಗಿ ಜಾಗತಿಕ ನಾಯಕರು ಕಾಯುತ್ತಿರುವ ನಡುವೆ ತೈಲ ಬೆಲೆ ಇಳಿಕೆ ಕಂಡಿದೆ. ಉಭಯ ದೇಶಗಳ ನಡುವೆ ವಾರದ ಹಿಂದೆ ಕ್ಷಿಪಣಿ ದಾಳಿ ವಿನಿಮಯ ಮಾಡಿಕೊಂಡ ನಂತರವೂ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದರೂ ತೈಲ ಬೆಲೆ ಇಳಿಕೆ ಕಂಡಿದೆ

ಕಳೆದ ನಾಲ್ಕು ತಿಂಗಳ ಸಂಘರ್ಷವನ್ನು ಕೊನೆಗೊಳಿಸುವ ಗುರಿ ಹೊಂದಿರುವ ಮಧ್ಯಂತರ ಕದನ ವಿರಾಮವನ್ನು ಒತ್ತಡಕ್ಕೆ ಒಳಪಡಿಸಿದೆ.ಆಗಸ್ಟ್ ವಿತರಣೆಗೆ ಬ್ರೆಂಟ್ ಕಚ್ಚಾ ತೈಲದ ಭವಿಷ್ಯ ಬ್ಯಾರೆಲ್‌ಗೆ ಶೇಕಡಾ 1.03 ರಷ್ಟು ಅಥವಾ 75 ಸೆಂಟ್‌ಗಳಷ್ಟು ಕುಸಿದು 72.40 ಡಾಲರ್‌ಗೆ ತಲುಪಿದೆ.

ಹೆಚ್ಚು ಸಕ್ರಿಯವಾಗಿ ವಹಿವಾಟು ನಡೆಸಲಾದ ಸೆಪ್ಟೆಂಬರ್ ಬ್ರೆಂಟ್ ಒಪ್ಪಂದ ಬ್ಯಾರೆಲ್‌ಗೆ 73.51 ಡಾಲರ್ ಗೆ ಕುಸಿದು ಶೇ.0.54 ರಷ್ಟು ಅಥವಾ 40 ಸೆಂಟ್‌ಗಳಷ್ಟು ಕುಸಿದಿದೆ.

ಈ ನಡುವೆ ಅಮೆರಿಕ ವೆಸ್ಟ್ ಟೆಕ್ಸಾಸ್ ಇಂಟರ್ಮೀಡಿಯೇಟ್ ಕಚ್ಚಾ ತೈಲ ಬ್ಯಾರೆಲ್‌ಗೆ ಶೇಕಡಾ 0.66 ರಷ್ಟು ಅಥವಾ 47 ಸೆಂಟ್‌ಗಳಷ್ಟು ಕುಸಿದು 70.32 ಡಾಲರ್ ಗೆ ಕುಸಿದಿದೆ

ಇರಾನ್ ಮತ್ತು ಒಮಾನಿ ತಜ್ಞರು ಹಾರ್ಮುಜ್ ಜಲಸಂಧಿಯ ಮೂಲಕ ಸಾಗಣೆ ಮಾರ್ಗಗಳನ್ನು ಮರು ವ್ಯಾಖ್ಯಾನಿಸುವ ಕುರಿತು ಮುಂದಿನ ದಿನಗಳಲ್ಲಿ ಚರ್ಚೆ ಪ್ರಾರಂಭಿಸುವ ನಿರೀಕ್ಷೆಯಿದೆ ಎಂದು ಇರಾನ್ ಉಪ ವಿದೇಶಾಂಗ ಸಚಿವ ಕಜೆಮ್ ಘರಿಬಬಾದಿ ತಿಳಿಸಿದ್ದಾರೆ.



ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೈ ಪ್ರತಿಕ್ರಿಯಿಸಿ ಗೊತ್ತುಪಡಿಸಿದ ಹಡಗು ಮಾರ್ಗಗಳ ಹೊರಗೆ ಹಡಗುಗಳು ಪ್ರಯಾಣಿಸುವುದನ್ನು ತಡೆಯಲು ಇರಾನ್ ಪ್ರಯತ್ನಿಸುತ್ತದೆ ಅದೇ ಸಮಯದಲ್ಲಿ, ಮುಂಬರುವ ದಿನಗಳಲ್ಲಿ ಅಮೆರಿಕದೊಂದಿಗೆ ಯಾವುದೇ ಸಭೆಗಳು ಅಥವಾ ಮಾತುಕತೆಗಳನ್ನು ಯಾವುದೇ ಮಟ್ಟದಲ್ಲಿ ನಿಗದಿಪಡಿಸಲಾಗಿಲ್ಲ ಎಂದು ಸ್ಪಷ್ಟಪಡಿಸಿದ್ಧಾರೆ

ಸಂಭಾವ್ಯ ಮಾತುಕತೆಗಳ ಕುರಿತಾದ ಸಂಘರ್ಷದ ಸಂಕೇತಗಳು ಜೂನ್ 17 ರ ಕದನ ವಿರಾಮ ಒಪ್ಪಂದದ ದುರ್ಬಲತೆ ಒತ್ತಿಹೇಳುತ್ತವೆ, ಹಾರ್ಮುಜ್ ಜಲಸಂಧಿಯ ಮೂಲಕ ಜಾಗತಿಕ ತೈಲ ಸಾಗಣೆ ಅಡ್ಡಿಪಡಿಸಿದ ನವೆಂಬರ್ ಕಾಂಗ್ರೆಸ್ ಚುನಾವಣೆಗೆ ಮುಂಚಿತವಾಗಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ರಾಜಕೀಯ ಪರೀಕ್ಷೆ ಸೃಷ್ಟಿಸಿದ ಹಗೆತನವನ್ನು ತಾತ್ಕಾಲಿಕವಾಗಿ ನಿಲ್ಲಿಸಿದೆ

## ದೇಣಿಗೆ ಕಳುವು ಪ್ರಕರಣ: ರಾಡಾರ್‌ನಲ್ಲಿ 80ಕ್ಕೂ ಹೆಚ್ಚು ಮಂದಿ



**ಅಯೋಧ್ಯೆ, ಜೂ. 30–** ಜಗತ್ಪಸಿದ್ಧ ಅಯೋಧ್ಯೆಯ ಶ್ರೀರಾಮ ಮಂದಿರದ ದೇಣಿಗೆ ಹಣ ಕಳುವು ಪ್ರಕರಣದ ತನಿಖೆ ತೀವ್ರಗೊಂಡಿದ್ದು, ವಿಶೇಷ ತನಿಖಾ ತಂಡದ ವರದಿ ಬೆನ್ನಲ್ಲೇ ಆಡಳಿತಾತ್ಮಕ ಮತ್ತು ಕಾನೂನು ಕ್ರಮಗಳು ವೇಗ ಪಡೆದುಕೊಂಡಿವೆ.

ಕಳೆದ 17 ವರ್ಷಗಳಿಂದ ಅಯೋಧ್ಯೆಯಲ್ಲೇ ಬೀಡುಬಿಟ್ಟಿದ್ದ ರೇಡಿಯೋ ನಿರ್ವಹಣಾ ಅಧಿಕಾರಿ ಅರ್ಜುನ್ ದೇವ್ ಅವರನ್ನು ತಕ್ಷಣವೇ ಜಾರಿಗೆ ಬರುವಂತೆ ಗೋರಖ್‌ಪುರಕ್ಕೆ ವರ್ಗಾವಣೆ ಮಾಡಲಾಗಿದೆ. ಮತ್ತೊಂದೆಡೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಎಲ್ಲಾ ಎಂಟು ಮಂದಿ ಆರೋಪಿಗಳನ್ನು ಜುಲೈ 14ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

2009ರಿಂದ ಅಯೋಧ್ಯೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅರ್ಜುನ್ ದೇವ್ ಅವರ ವರ್ಗಾವಣೆಗೆ ಈ ಹಿಂದೆ ಹಲವು ಬಾರಿ ಆದೇಶ ಹೊರಡಿಸಲಾಗಿದ್ದರೂ, ಪ್ರತಿ ಬಾರಿಯೂ ಪ್ರಭಾವ ಬಳಸಿ ಅದನ್ನು ರದ್ದುಗೊಳಿಸಿಕೊಳ್ಳುತ್ತಿದ್ದರು ಎನ್ನಲಾಗಿದೆ. ಇತ್ತೀಚೆಗೆ ಲಕ್ನೋಗೆ ಮಾಡಲಾಗಿದ್ದ ವರ್ಗಾವಣೆಯೂ ರದ್ದಾಗಿತ್ತು. ಆದರೆ, ಎಸ್‌ಐಟಿ ವರದಿಯಲ್ಲಿ ಇವರ ಕಾರ್ಯವೈಖರಿ ಬಗ್ಗೆ ಗಂಭೀರ ಪ್ರಶ್ನೆಗಳು ಎದ್ದ ಹಿನ್ನೆಲೆಯಲ್ಲಿ ಈ ಬಾರಿ ಗೋರಖ್‌ಪುರಕ್ಕೆ ಎತ್ತಂಗಡಿ ಮಾಡಲಾಗಿದೆ.

ದೇಣಿಗೆ ಎಣಿಕೆ ಕೊಠಡಿಯ ಸಿಸಿಟಿವಿ ಕಣ್ಗಾವಲು ಮತ್ತು ಮಂದಿರದ ಸಂಕೀರ್ಣದಲ್ಲಿರುವ ಸುಮಾರು 1,600 ಸಿಸಿಟಿವಿ ಕ್ಯಾಮೆರಾಗಳ ಉಸ್ತುವಾರಿ ಇವರ ಹೆಗಲಿಗೇ ಇತ್ತು. ಅಧಿಕೃತ ಕರ್ತವ್ಯದ ಹೊರತಾಗಿ, ವಿವಿಐಪಿ ದರ್ಶನ ವ್ಯವಸ್ಥೆ ಹಾಗೂ ಮಂದಿರದ ಆಡಳಿತ ಮಂಡಳಿಯ ಇತರ ಪ್ರಮುಖ ನಿರ್ಧಾರಗಳಲ್ಲೂ ಇವರು ಹಸ್ತಕ್ಷೇಪ ಮಾಡುತ್ತಿದ್ದರು ಎಂದು ಎಸ್‌ಐಟಿ ವರದಿ ಉಲ್ಲೇಖಿಸಿದೆ.

ಪ್ರಕರಣದ ತನಿಖೆ ಕೇವಲ ಬಂಧಿತ ಆರೋಪಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಮಂದಿರದ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಸೇರಿದಂತೆ ಸುಮಾರು 70 ರಿಂದ 80 ಜನರು ಈಗ ತನಿಖಾ ಸಂಸ್ಥೆಯ ರಾಡಾರ್‌ನಲ್ಲಿದ್ದಾರೆ. ಅನುಮಾನಾಸ್ಪದ ನಡೆ ಹೊಂದಿರುವ ಇವರೆಲ್ಲರಿಗೂ ನೋಟಿಸ್ ಜಾರಿ ಮಾಡಲಾಗಿದ್ದು, ಶೀಘ್ರದಲ್ಲೇ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಮಂದಿರದ ವ್ಯವಹಾರ ಹೊಂದಿರುವ ಎಸ್‌ಬಿಐ ಬ್ಯಾಂಕ್ ಆಫ್ ಬರೋಡಾ ಮತ್ತು ಕೆನರಾ ಬ್ಯಾಂಕ್ ಸೇರಿದಂತೆ ಒಟ್ಟು ಆರು ಪ್ರಮುಖ ಬ್ಯಾಂಕುಗಳಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ. ನಗದು ಎಣಿಕೆ ಪ್ರಕ್ರಿಯೆಯ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದ ಎಸ್‌ಬಿಐ ನೌಕರರಾದ ರತ್ನೇಷ್ ಚತುರ್ವೇದಿ ಮತ್ತು ಗಗನ್‌ದೀಪ್ ಅವರ ಪಾತ್ರದ ಬಗ್ಗೆ ತೀವ್ರ ತನಿಖೆ ನಡೆಯುತ್ತಿದೆ. ಜೊತೆಗೆ, ಮಂದಿರದ ಟ್ರಸ್ಟ್ ಉದ್ಯೋಗಿಗಳ ಸಂಪೂರ್ಣ ಬ್ಯಾಂಕ್ ಖಾತೆ ವಿವರಗಳನ್ನು ನೀಡುವಂತೆ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

ಬಂಧಿತ ಆರೋಪಿಗಳು ಕೃತ್ಯದ ಬಳಿಕ ತಮ್ಮ ಮೊಬೈಲ್‌ನಿಂದ ಪ್ರಮುಖ ವಾಟ್ಸಾಪ್ ಸಂದೇಶಗಳನ್ನು ಡಿಲೀಟ್ ಮಾಡಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ.

ಕಳೆದುಹೋದ ಡಿಜಿಟಲ್ ಸಾಕ್ಷ್ಯಗಳನ್ನು ಮರುಪಡೆಯಲು ಎಲ್ಲಾ 8 ಮೊಬೈಲ್ ಫೋನ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದೆ. ಸೋಮವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಆರೋಪಿಗಳನ್ನು ಭ್ರಷ್ಟಾಚಾರ ನಿರೋಧಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಕೋರ್ಟ್ ಇವರನ್ನು ಜುಲೈ 14ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಆರೋಪಿಗಳ ಮನೆಗಳ ಮೇಲೆ ನಡೆಸಿದ ದಾಳಿಯ ಸಂದರ್ಭದಲ್ಲಿ ಭೂ ನೋಂದಣಿ ದಾಖಲೆಗಳು, ಆಸ್ತಿ ಪತ್ರಗಳು ಮತ್ತು ಬ್ಯಾಂಕ್ ಪಾಸ್‌ಬುಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರೊಂದಿಗೆ ಭಾರಿ ಪ್ರಮಾಣದ ಚಿನ್ನ ಮತ್ತು ಬೆಳ್ಳಿ ಆಭರಣಗಳು ಪತ್ತೆಯಾಗಿದ್ದು, ಇವುಗಳನ್ನು ಮಂದಿರದ ದೇಣಿಗೆ ಹಣದಿಂದಲೇ ಖರೀದಿಸಲಾಗಿದೆಯೇ ಎಂಬ ನಿಟ್ಟಿನಲ್ಲಿ ಪರಿಶೀಲನೆ ನಡೆಯುತ್ತಿದೆ.

## ಜಾನಪದ ಸಂಗೀತ ಕಾರ್ಯಕ್ರಮ



**ಗುರುಮಠಕಲ್:ಜೂ.30:** ಸಂಗೀತ ಜಗದ್ಗುರು, ತುಲಾಭಾರ ತಪೋನಿಧಿ, ಪದ್ಮಭೂಷಣ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ ಹೆಸರಿನಲ್ಲಿ ಕಾರಹುಣಿಮೆಯ ನಿಮಿತ್ಯ ಸಂಗೀತ, ಜಾನಪದ ಹಾಗೂ ಸಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸಮಿಪದ ಗಾನಯೋಗಿ ಡಾಕ್ಟರ್ ಪುಟ್ಟರಾಜ ಸಂಗೀತ ಸಾಹಿತ್ಯ ನಿರಂತರ ಸಾಂಸ್ಕೃತಿಕ ಕಲಾ ಸಂಸ್ಥೆ ಚಂಡರಕಿ ಸಂಸ್ಥೆಯಲ್ಲಿ, ಕಾರಹುಣಿಮೆಯ ನಿಮಿತ್ಯ ಜರುಗಿದ ಸಂಗೀತ, ಜಾನಪದ ಮತ್ತು ಸಾಂಸ್ಕೃತಿಕ ಗಳನ್ನು ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರಾಜಲಿಂಗಪ್ಪ ಸಜ್ಜನ ಚಂಡರಕಿ ಅವರು ಮಾತನಾಡಿ ಆರಾಧ್ಯ ದೇವರು ಡಾ. ಪುಟ್ಟ ರಾಜ ಗವಾಯಿಗಳು ಈ ದೇಶಕಂಡ ಒಬ್ಬ ಅಪರೂಪದ ವ್ಯಕ್ತಿತ್ವ ಹೊಂದಿದ ಸಾಕ್ಷಾತ್ ಶಿವನವತಾರವು. ಹಾನಗಲ್ಲ ಶ್ರೀ ಪೂಜ್ಯ ಕುಮಾರ ಮಹಾಸ್ವಾಮಿಗಳ ಆಧ್ಯಾತ್ಮಶಕ್ತಿ, ಪೂಜ್ಯ ಶ್ರೀ ಪಂಚಾಕ್ಷರ ಗವಾಯಿಗಳವರ ಗಾನಶಕ್ತಿ ಮುಂದುವರೆದು ಡಾಕ್ಟರ್ ಪಂ. ಪುಟ್ಟರಾಜ ಗವಾಯಿಗಳು ಜ್ಞಾನ ದೇವತಾ ಪುರುಷರಾಗಿ ಬೆಳೆದು ಬಂದವರು ಎಂದು ಸಂಕ್ಷಿಪ್ತ ವಾಗಿ ಪೂಜ್ಯ ಶ್ರೀಗಳ ಕಿರು ಪರಿಚಯದ ನುಡಿಗಳನ್ನಾಡಿದರು. ಈ ವೇಳೆ ಸಂಗೀತ ಪ್ರೇಮಿಗಳು ಹಾಗೂ ಆಧ್ಯಾತ್ಮಿಕ ಚಿಂತಕರು ಬಿಮರೆಡ್ಡಿ ಇಟ್ಲಪೂರ,ಗೋವರ್ಧನ ರೆಡ್ಡಿ ಗಡದಾನ, ಗಾನಯೋಗಿ ಸಜ್ಜನ, ಶಿವಯೋಗಿ ಸಜ್ಜನ್,ಬ?ಲಾಟ {ದೊಡ್ಡಾಟ} ಗುರುಗಳು ಬಾಲಪ್ಪ ಇಂಟೆನಿಕಿ, ಧನ್ಮಜಯ ಕುಲಕರ್ಣಿ ,ಗ್ರಂಥ ಪಾಲಕರು ಬಿಮಶಪ್ಪ ಪಿರೆಮೋಳ್,ಮಹದೇವಪ್ಪ ಗೊಳಿ, ನರಸಪ್ಪ ಗಿಡ್ಡಿ, ಅಂಜಪ್ಪ ಕಂಬಾರ, ಬಿಮಶಪ್ಪ ಬೊಡ, ವೆಂಕಟಪ್ಪ ಹಡಪದ್, ಹಾಗೂ ವಿಧ್ಯಾರ್ಥಿಗಳು ಇದ್ದರು. ತದನಂತರ ಭಜನ ಕಾರ್ಯಕ್ರಮವು ಜರುಗಿತು.

# ಸರ್ಕಾರಿ ಶಾಲೆ ಸುತ್ತಲಿನ ತಡೆಗೋಡೆ ನಿರ್ಮಾಣದಲ್ಲಿ ಭಾರಿ ಅವ್ಯವಹಾರ:ರವಿಕುಮಾರ

**ಸೈದಾಪುರ:ಜೂ.30:**ಪಟ್ಟಣದ ಸರ್ಕಾರಿ ಪ್ರೌಢ ಶಾಲೆಯ ಸುತ್ತ ನಿರ್ಮಿಸುತ್ತಿರುವ ತಡೆಗೋಡೆ ಕಾಮಾಗಾರಿಯಲ್ಲಿ ಕಳಪೆ ಗುಣಮಟ್ಟ ಹಾಗೂ ಬಾರಿ ಅವ್ಯವಹಾರದಿಂದ ಕೂಡಿದೆ ಎಂದು ಸಾಮಾಜಿಕ ಕಾರ್ಯಕರ್ತ ರವಿಕುಮಾರ ಕಡೇಚೂರು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು. 2023–24ನೇ ಸಾಲಿನ ಕೆಕೆಆರಡಿಬಿ ಯೋಜನೆಯಡಿ ಸುಮಾರು ?1.5 ಕೋಟಿ ಅನುದಾನದಲ್ಲಿ ನಿರ್ಮಿಸುತ್ತಿರುವ ಶಾಲಾ ಕಾಂಪೌಂಡ್‌ನ ಉದ್ದ997 ಮೀಟರ್ ಇದ್ದು, ಸ್ಥಳದಲ್ಲಿ ಕೇವಲ 330 ಮೀಟರ್ ಉದ್ದದ ಹಳೆಯ ಪಾಯದ ಮೇಲೆ ಹೊಸ ಗೋಡೆಯನ್ನು ಕಳಪೆ ಕಾಮಾಗಾರಿಯ ತಡೆಗೋಡೆ ನಿರ್ಮಿಸಲಾಗುತ್ತಿದೆ. ಇದು ನೈಜ ಅಳತೆ ಪರಿಶೀಲಿಸದೆ ಕಾಮಗಾರಿ ಆರಂಭಿಸಿರುವುದು ಜನರ ಕಣ್ಣಿಗೆ ಮಣ್ಣು ಎರಚುವ ಪ್ರಯತ್ನವಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು, ಕಾಮಗಾರಿಯನ್ನು ತಕ್ಷಣ ಸ್ಥಗಿತಗೊಳಿಸಿ, ತಾಂತ್ರಿಕ ತಜ್ಞರ ತಂಡದಿಂದ ಸ್ಥಳ ಪರಿಶೀಲನೆ ನಡೆಸಬೇಕು. ಹಳೆಯ ಪಾಯದ ಸಾಮರ್ಥ್ಯ, ಕಾಮಗಾರಿಯ ಅಂದಾಜು ವೆಚ್ಚ ಹಾಗೂ ಗುಣಮಟ್ಟದ ಮಾನದಂಡಗಳ ಕುರಿತು ಸಮಗ್ರ ತನಿಖೆ ನಡೆಸಿ, ಯಾವುದೇ ಅಕ್ರಮ ಅಥವಾ ನಿರ್ಲಕ್ಷ್ಯ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಶಾಲೆಯ ಮುಂದೆ



ಗ್ರಾಮಸ್ಥರೊಡನೆ ಬೃಹತ್ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮಹೇಶ ಜೇಗರ ಸೇರಿದಂತೆ ಇತರರಿದ್ದರು

# ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿದ್ದರೆ ಯಾವ ಸೌಲಭ್ಯವೂ ಸಿಗಲ್ಲ

**ರಾಜ್ಯಾದ್ಯಂತ ಇಂದಿನಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಸದಾಶಿವನಗರದ ತಮ್ಮ ನಿವಾಸದಲ್ಲಿ ಅಧಿಕಾರಿಗಳಿಂದ ಗಣತಿ ನಮೂನೆ ಪಡೆದು ಭರ್ತಿ ಮಾಡುವ ಮೂಲಕ ಚಾಲನೆ ನೀಡಿದರು. ಕನಕಪುರದ ದೊಡ್ಡಾಲಹಳ್ಳಿಯನ್ನು ಒಳಗೊಂಡ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿ ಯಶವಂತ್ ಗುರುಕರ್ ಇದ್ದರು.**

**ಬೆಂಗಳೂರು, ಜೂ.30–** ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿರುವವರಿಗೆ ಗ್ಯಾರಂಟಿ ಸೇರಿದಂತೆ ಸರ್ಕಾರದ ಯಾವ ಸೌಲಭ್ಯವು ಸಿಗುವುದಿಲ್ಲ ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದರು ಟ ಸದಾಶಿವನಗರ ನಿವಾಸದಲ್ಲಿ ಇಂದು ಬೆಳಿಗ್ಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ .ತಮ್ಮ ಎನ್ಯುಮರೇಶನ್ ಫಾರಂ (ಗಣತಿ ನಮೂನೆ) ಭರ್ತಿ ಮಾಡುವ ಮೂಲಕ ಸಿಎಂ ಡಿ ಕೆ ಶಿವಕುಮಾರ್ ಅವರು ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ನಮ್ಮ ರಾಜ್ಯದ ಮತದಾರರಲ್ಲದವರಿಗೆ ಗ್ಯಾರಂಟಿ ಸೇರಿದಂತೆ ಸರ್ಕಾರದ ಸೌಲಭ್ಯಗಳನ್ನು ಕೊಡುವುದರಲ್ಲಿ ಅರ್ಥವಿಲ್ಲ ಬಿಹಾರ ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಲ್ಲಿ ಈಗಾಗಲೇ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದವರಿಗೆ ಸೌಲಭ್ಯಗಳನ್ನು ನಿಲ್ಲಿಸಲಾಗಿದೆ.

ರಾಜ್ಯದಲ್ಲೂ ಅದೇ ರೀತಿ ಆಗುತ್ತದೆ ಎಂದು ಹೇಳಿದರು ಪ್ರತಿಯೊಬ್ಬರೂ ಮತದಾರರ ಪಟ್ಟಿಯಲ್ಲಿ ಹೆಸರು ಇರುವಂತೆ ನೋಡಿಕೊಳ್ಳಬೇಕು ಎಂದು ಅವರು ತಿಳಿಸಿದರು

"ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಟ ಆರಂಭವಾಗಿದ್ದು, ನನ್ನ ಮನೆಯಿಂದಲೇ ಈ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ನನ್ನ ಎನ್ಯುಮರೇಷನ್ ಅರ್ಜಿಯನ್ನು ಭರ್ತಿ ಮಾಡಿ ಸಹಿ ಮಾಡಿ ಸಲ್ಲಿಕೆ ಮಾಡಿರುವೆ. ನೀವು ನಿಮ್ಮ ಹೆಸರಿನ ಜೊತೆಗೆ ಈ ಹಿಂದೆ ಮತದಾರ ಪಟ್ಟಿ ಸಮಯದಲ್ಲಿ ನೀಡಲಾಗಿದ್ದ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕಾಗುತ್ತದೆ. ಇಲ್ಲವಾದರೆ ಹೊಸ ಮೊಬೈಲ್ ಸಂಖ್ಯೆಯನ್ನು ಅಧಿಕಾರಿಗಳ ಮೂಲಕ ಸೇರ್ಪಡೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಯಾವ ಸಂಖ್ಯೆ ನೀಡಿರುತ್ತಿರೋ ಅದೇ ಸಂಖ್ಯೆಗೆ ಒಟಿಪಿ ಬರಲಿದೆ" ಎಂದು ಮಾಹಿತಿ ನೀಡಿದರು.

"ನೀವು ನಿಮ್ಮ ಹೆಸರಿನಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶವಿದೆ. ಬಿಎಲ್‌ಎ,



ಬಿಎಲ್‌ಓ ಹಾಗೂ ಮೇಲ್ವಿಚಾರಕರು ಈಗಾಗಲೇ ವಾಟ್ಸಪ್ ಗ್ರೂಪ್ ಮಾಡಿಕೊಂಡಿದ್ದಾರೆ. ಕುಟುಂಬದ ಸದಸ್ಯರ ಪೈಕಿ ಒಬ್ಬರು ಸಹಿ ಮಾಡಿದರೂ ಸಾಕು. ಕುಟುಂಬದವರ ಪರವಾಗಿ ಒಬ್ಬರೇ ಎಲ್ಲರ ಅರ್ಜಿ ತುಂಬಬಹುದು. ಅದನ್ನು ಸ್ವೀಕಾರ ಮಾಡಿಕೊಳ್ಳಲಾಗುವುದು. ನಿಮ್ಮ ಫೋಟೋ ಬದಲಾಯಿಸಿಕೊಳ್ಳಬೇಕಾದರೆ ಅರ್ಜಿಯಲ್ಲಿ ಹೊಸ ಫೋಟೋ ನೀಡಬಹುದು. ಹೊಸ ಮತದಾರರು ನಿವಾಸ ದೃಢೀಕರಣ ಪತ್ರ ನೀಡಬೇಕು. ಕರ್ನಾಟಕ ಸರ್ಕಾರ ರಾಜ್ಯದ ಜನರಿಗೆ ಅಗತ್ಯ ಪ್ರಮಾಣಪತ್ರ ನೀಡಲು ಮುಂದಾಗಿದೆ. ಎಲ್ಲರೂ ತಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಬೇಕು.

ಉಳಿಸಿಕೊಳ್ಳದಿದ್ದರೆ ಸರ್ಕಾರ ಸೌಲಭ್ಯ, ಕಾರ್ಯಕ್ರಮಗಳನ್ನು ಪಡೆಯುವುದು ಕಷ್ಟವಾಗಲಿದೆ" ಎಂದು ಮಾಹಿತಿ ನೀಡಿದರು.


ಕೆಲವು ಅನಕ್ಷರಸ್ಥರಿಗೆ ಆಪ್ ಬಳಸುವುದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಕೇಳಿದಾಗ, "ಆಪ್ ಬಳಸುವ ವಿಚಾರದಲ್ಲಿ ನನಗೂ ಮಾಹಿತಿ ಇಲ್ಲ. ನಾನು ಬೇರೆಯವರ ಸಹಾಯ ಪಡೆದೆ. ಈ ಕಾರಣಕ್ಕೆ ಬಿಎಲ್‌ಓಗಳ ಮೂಲಕ ಅರ್ಜಿ ಪಡೆದು ಆಫ್ ಲೈನ್ ಮೂಲಕವೇ ಅರ್ಜಿ ತುಂಬಬಹುದು" ಎಂದು ತಿಳಿಸಿದರು.

# ಸಿಡ್ಕೊದಿಂದ 100 ಜನರಿಗೆ ಆಹಾರ ಪೊಟ್ಟಣ ವಿತರಣೆ

**ಬೀದರ್: ಜೂ.30:**ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಮಂಡಳಿ (ಸಿಡ್ಕೊ) ವತಿಯಿಂದ ಇಲ್ಲಿಯ ರೈಲು ನಿಲ್ದಾಣ ಸಮೀಪ ಈಚೆಗೆ 100 ಜನರಿಗೆ ಉಚಿತ ಆಹಾರ ಪೊಟ್ಟಣ ಹಾಗೂ ನೀರಿನ ಬಾಟಲಿ ವಿತರಿಸಲಾಯಿತು.

ನಿರ್ಗತಿಕರು, ವೃದ್ಧರು, ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ಮಂಡಳಿ ಪ್ರತಿನಿಧಿಗಳು ಆಹಾರ ಪೊಟ್ಟಣ ವಿತರಿಸಿದರು.

ಮಂಡಳಿಯ ಅಧ್ಯಕ್ಷ ಎಸ್.ಕೆ. ಠಾಕೂರ್, ವ್ಯವಸ್ಥಾಪಕ ನಿರ್ದೇಶಕ ಅಭಿಷೇಕಕುಮಾರ ಹಾಗೂ ಭಾನು ತಿವಾರಿ ಅವರ ಮಾರ್ಗದರ್ಶನದಲ್ಲಿ ದೇಶದಾದ್ಯಂತ ಮಂಡಳಿಯ ಶಾಖೆಗಳಲ್ಲಿ ಪ್ರತಿ ಶನಿವಾರ ನಿರ್ಗತಿಕರು, ಅವಶ್ಯಕತೆ ಇರುವವರು ಹಾಗೂ ಸಾರ್ವಜನಿಕರಿಗೆ ಉಚಿತ ಆಹಾರ ಪೊಟ್ಟಣ ವಿತರಿಸಲಾಗುತ್ತಿದೆ ಎಂದು ಮಂಡಳಿಯ ದಕ್ಷಿಣ ವಲಯ ಅಭಿವೃದ್ಧಿ ಅಧಿಕಾರಿ ಮಿಲಿಂದ್ ಕುಲಕರ್ಣಿ ತಿಳಿಸಿದರು.ನಗರದಲ್ಲಿ ಬರುವ ದಿನಗಳಲ್ಲಿ ಮಂಡಳಿಯಿಂದ ವಿವಿಧ ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳುವ ಉದ್ದೇಶ ಇದೆ ಎಂದು ಹೇಳಿದರು.ಮಂಡಳಿಯ ಜೈರಾಜ್, ಗೋರಕನಾಥ, ರವಿ, ಆನಂದ, ಮೋನಿಕಾ, ಅನ್ನಪೂರ್ಣ ಮತ್ತಿತರರು ಇದ್ದರು.



# ರಾಜ್ಯಮಟ್ಟದ ಕವನ ಸ್ಪರ್ಧೆಯಲ್ಲಿ ಪತ್ರಕರ್ತ ಚಂದಪ್ಪ ದೋರನಹಳ್ಳಿಗೆ ದ್ವಿತೀಯ ಸ್ಥಾನ



ಯಾದಗಿರಿ:ಜೂ.30:ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ ಕಥೆ ಹಾಗೂ ಕವನ ಸ್ಪರ್ಧೆಯಲ್ಲಿ ಹಿರಿಯ ಪತ್ರಕರ್ತ ಹಾಗೂ ಸಾಹಿತಿ ಚಂದಪ್ಪ ದೋರನಹಳ್ಳಿ ಅವರು ರಚಿಸಿದ 'ಹೆತ್ತವ್ವನ ಸೆರಗಿನ ಚಪ್ಪರ' ಕವನವು ದ್ವಿತೀಯ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದೆ.

ರಾಜ್ಯದ ವಿವಿಧ ಜಿಲ್ಲೆಗಳ ಪತ್ರಕರ್ತರು ಹಾಗೂ ಸಾಹಿತ್ಯಾಸಕ್ತರು ಭಾಗವಹಿಸಿದ್ದ ಪ್ರತಿಷ್ಠಿತ ಸ್ಪರ್ಧೆಯಲ್ಲಿ, ತಾಯಿಯ ಅಪಾರ ಮಮತೆ, ಗ್ರಾಮೀಣ ಬದುಕಿನ ನೈಜ ಚಿತ್ರಣ, ಸಂಬಂಧಗಳ ಮೌಲ್ಯ ಮತ್ತು ಮಾನವೀಯ ಭಾವನೆಗಳನ್ನು ಮನಮುಟ್ಟುವ ರೀತಿಯಲ್ಲಿ ಕಟ್ಟಿಕೊಟ್ಟ 'ಹೆತ್ತವ್ವನ ಸೆರಗಿನ ಚಪ್ಪರ' ಕವನವು ತೀರ್ಪುಗಾರರ ಮೆಚ್ಚುಗೆಗೆ ಪಾತ್ರವಾಗಿ ದ್ವಿತೀಯ ಬಹುಮಾನಕ್ಕೆ ಆಯ್ಕೆಯಾಗಿದೆ.

ಪ್ರಸ್ತುತ ರಾಯಚೂರು ಜಿಲ್ಲೆಯ ಬಿಟಿವಿ ವರದಿಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಚಂದಪ್ಪ ದೋರನಹಳ್ಳಿ ಅವರು ಕಳೆದ 15 ವರ್ಷಗಳಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸತ್ಯನಿಷ್ಠೆ, ಬದ್ಧತೆ ಹಾಗೂ ನೇರ-ದಿಟ್ಟ ವರದಿಗಾರಿಕೆಯ ಮೂಲಕ ತಮ್ಮದೇ ಆದ ವಿಶಿಷ್ಟ ಗುರುತು ಮೂಡಿಸಿದ್ದಾರೆ.

ಪತ್ರಿಕೋದ್ಯಮದ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮ ಸೃಜನಶೀಲತೆಯನ್ನು ಮುಂದುವರಿಸಿರುವ ಅವರು, ಸಮಾಜದ ಬದುಕು, ಗ್ರಾಮೀಣ ಸಂವೇದನೆಗಳು ಮತ್ತು ಮಾನವೀಯ ಮೌಲ್ಯಗಳಿಗೆ ತಮ್ಮ ಬರಹಗಳ ಮೂಲಕ ಧ್ವನಿಯಾಗಿದ್ದಾರೆ.

ಚಂದಪ್ಪ ದೋರನಹಳ್ಳಿ ಅವರ ಈ ಸಾಧನೆಗೆ ಸಾಹಿತ್ಯ ವಲಯದ ಗಣ್ಯರು, ಹಿರಿಯ ಕವಿಗಳು, ಪತ್ರಕರ್ತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ.

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವ ಸಮಾರಂಭದಲ್ಲಿ ಆಗಸ್ಟ್ ಕೊನೆಯ ವಾರದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದ್ದು, ಈ ಗೌರವವು ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳ ಸಾಹಿತ್ಯ ಹಾಗೂ ಪತ್ರಿಕೋದ್ಯಮ ಕ್ಷೇತ್ರಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದು ಗಣ್ಯರು ಹರ್ಷ ವ್ಯಕ್ತಪಡಿಸಿದ್ದಾರೆ.

# ಮನಗನಾಳ ಗ್ರಾಮದ ಮೊದಲ ಭಾರತೀಯ ಸೇನಾ ಯೋಧನಾಗಿ ಆಕಾಶ್ ಆಯ್ಕೆ



**ಯಾದಗಿರಿ:ಜೂ.30:** ಶಹಾಪುರ ತಾಲೂಕಿನ ಮನಗನಾಳ ಗ್ರಾಮದ ಯುವಕ ಕು. ಆಕಾಶ್ ತಂದೆ ಸಿದ್ದಪ್ಪ ಪೂಜಾರಿ ಅವರು ಭಾರತೀಯ ಸೇನೆಗೆ ಆಯ್ಕೆಯಾಗುವ ಮೂಲಕ ಗ್ರಾಮಕ್ಕೆ ಹಾಗೂ ಜಿಲ್ಲೆಗೆ ಹೆಮ್ಮೆ ತಂದಿದ್ದಾರೆ. ಗ್ರಾಮದ ಇತಿಹಾಸದಲ್ಲೇ ಮೊದಲ ಬಾರಿಗೆ ಭಾರತೀಯ ಸೇನೆಯ ಯೋಧನಾಗಿ ಹೊರಹೊಮ್ಮಿದ ಆಕಾಶ್ ಅವರಿಗೆ ಗ್ರಾಮಸ್ಥರು ಸೋಮವಾರ ಅದ್ದೂರಿ ಹಾಗೂ ಗೌರವಪೂರ್ವಕ ಸ್ವಾಗತ ನೀಡಿ ಅಭಿನಂದಿಸಿದರು.

ಗ್ರಾಮೀಣ ಪ್ರತಿಭೆಯಾಗಿ ಬೆಳೆದ ಆಕಾಶ್ ಅವರು ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದು, ತಮ್ಮ ಪರಿಶ್ರಮ, ಶಿಸ್ತು ಹಾಗೂ ದೇಶ ಸೇವೆಯ ಅಪಾರ ಆಸಕ್ತಿಯಿಂದ 2025-26ನೇ ಸಾಲಿನ ಅಗ್ನಿವೀರ ಸೇನಾ ನೇಮಕಾತಿಯಲ್ಲಿ ಯಶಸ್ಸು ಸಾಧಿಸಿದ್ದಾರೆ. ಕಠಿಣ ಆಯ್ಕೆ ಪ್ರಕ್ರಿಯೆ ಹಾಗೂ ಏಳು ತಿಂಗಳ ಕಠಿಣ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಅಗ್ನಿವೀರನಾಗಿ ದೇಶ ಸೇವೆಗೆ ಸಜ್ಜಾಗಿದ್ದಾರೆ.

ಮನಗನಾಳ ಗ್ರಾಮದ ಯುವಕನೊಬ್ಬ ಭಾರತೀಯ ಸೇನೆಯಂತಹ ಪ್ರತಿಷ್ಠಿತ ಕ್ಷೇತ್ರಕ್ಕೆ ಆಯ್ಕೆಯಾಗಿರುವುದು ಗ್ರಾಮಸ್ಥರಲ್ಲಿ ಹೆಮ್ಮೆ ಹಾಗೂ ಸಂತಸದ ವಾತಾವರಣ ಮೂಡಿಸಿದೆ. ಆಕಾಶ್ ಅವರ ಸಾಧನೆ ಯಾದಗಿರಿ ಜಿಲ್ಲೆಯ ಯುವ ಸಮುದಾಯಕ್ಕೆ ಪ್ರೇರಣೆಯಾಗಿದ್ದು, ಗ್ರಾಮೀಣ ಭಾಗದ ಯುವಕರಲ್ಲೂ ದೇಶ ಸೇವೆಯ ಕನಸುಗಳಿಗೆ ಹೊಸ ಚೈತನ್ಯ ತುಂಬಿದೆ.

ಭಾರತ ಮಾತೆಯ ಸೇವೆಗೆ ಯಾದಗಿರಿ ಜಿಲ್ಲೆಯಿಂದ ಮತ್ತೊಬ್ಬ ಯೋಧ ಸಿದ್ಧರಾಗಿರುವುದು ಜಿಲ್ಲೆಯ ಪಾಲಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದರು.

# ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷರಾಗಿ ಪರಶುರಾಮ ಚವ್ಹಾಣ್ ನೇಮಕ



**ಯಾದಗಿರಿ:ಜೂ.30:** ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಉಪಾಧ್ಯಕ್ಷರನ್ನಾಗಿ ಪಕ್ಷದ ಹಿರಿಯ ಮುಖಂಡ ಪರಶುರಾಮ ಚವ್ಹಾಣ್ (ಚಾಮನಳ್ಳಿ ತಾಂಡಾ) ಅವರನ್ನು ನೇಮಕ ಮಾಡಲಾಗಿದೆ.

ಈ ಕುರಿತು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮರೆಪ್ಪ ಬಿಳ್ಹಾರ ಅವರು ಆದೇಶ ಹೊರಡಿಸಿದ್ದು, ಪಕ್ಷದ ಸಂಘಟನೆ ಹಾಗೂ ಜನಪರ ಕಾರ್ಯಗಳನ್ನು ಜನಸಾಮಾನ್ಯರ ಮನೆಮನೆಗೆ ತಲುಪಿಸುವ ಮಹತ್ವದ ಜವಾಬ್ದಾರಿಯನ್ನು ಪರಶುರಾಮ ಚವ್ಹಾಣ್ ಅವರಿಗೆ ವಹಿಸಲಾಗಿದೆ ಎಂದು ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯಕುಮಾರ ಸೊರಕೆ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸರಡ್ಡಿ ಅನಪುರ ಅವರ ಸೂಚನೆ ಮೇರೆಗೆ ಈ ನೇಮಕಾತಿ ಆದೇಶ ಪ್ರಕಟಿಸಲಾಗಿದೆ.

ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತಗಳು ಹಾಗೂ ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ಜೊತೆಗೆ, ಜಿಲ್ಲೆಯಾದ್ಯಂತ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ನೇಮಕಾತಿ ಕುರಿತು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹರ್ಷ ವ್ಯಕ್ತಪಡಿಸಿ, ಪರಶುರಾಮ ಚವ್ಹಾಣ್ ಅವರ ನೇತೃತ್ವದಲ್ಲಿ ಪ್ರಚಾರ ಸಮಿತಿ ಮತ್ತಷ್ಟು ಚುರುಕಾಗಿ ಕಾರ್ಯನಿರ್ವಹಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ವಿದ್ಯುತ್ ಖಾಸಗೀಕರಣ ವಿರೋಧಿಸಿ ಹೆಡಗಿಮದ್ರಾದಲ್ಲಿ ಕಾರ್ಮಿಕರ ಹೋರಾಟ



**ಯಾದಗಿರಿ:ಜೂ.30:** ವಿದ್ಯುತ್ ಸೇವೆಯ ಖಾಸಗೀಕರಣದ ಪ್ರಸ್ತಾವನೆ ವಿರೋಧಿಸಿ ಯಾದಗಿರಿ ತಾಲೂಕಿನ ಹೆಡಗಿಮದ್ರಾ ಗ್ರಾಮದಲ್ಲಿ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಗ್ರಾಮದ ಡಬ್ಬಿನ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿಯ ನರೇಗಾ ಕೂಲಿ ಕಾರ್ಮಿಕರ ನಡುವೆ ವಿದ್ಯುತ್ ಖಾಸಗೀಕರಣದ ದುಷ್ಪರಿಣಾಮಗಳ ಕುರಿತು ಜಾಗೃತಿ ಸಭೆ ಆಯೋಜಿಸಲಾಗಿತ್ತು. ಸಭೆಯಲ್ಲಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕ ಸಂಘಟನೆಯ (ಎಐಕೆಕೆಎಂಎಸ್) ಜಿಲ್ಲಾ ಉಪಾಧ್ಯಕ್ಷ ಜಮಾಲ್ ಸಾಬ್ ಎ ಹೆಡಗಿಮದ್ರಾ ಮಾತನಾಡಿ, ಸರ್ಕಾರದ ಆಸ್ತಿಪಾಸ್ತಿಗಳು ಹಾಗೂ ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಖಾಸಗಿ ಕಂಪನಿಗಳ ಕೈಗೆ ನೀಡುವ ಕ್ರಮದಿಂದ ಸಾಮಾನ್ಯ ಜನರು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

"ವಿದ್ಯುತ್ ಎನ್ನುವುದು ಜನರ ಮೂಲಭೂತ ಸಾರ್ವಜನಿಕ ಸೇವೆಯಾಗಿದೆ. ಇದನ್ನು ಸಂಪೂರ್ಣವಾಗಿ ಖಾಸಗಿ ಸಂಸ್ಥೆಗಳ ವಶಕ್ಕೆ ನೀಡುವುದರಿಂದ ಬಡವರು, ರೈತರು ಹಾಗೂ ಸಾಮಾನ್ಯ ಗ್ರಾಹಕರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳಲಿದೆ. ವಿದ್ಯುತ್ ದರ ಹೆಚ್ಚಳದ ಜೊತೆಗೆ ರೈತರ ಕೃಷಿ ಚಟುವಟಿಕೆಗಳ ಮೇಲೂ ದುಷ್ಪರಿಣಾಮ ಉಂಟಾಗಬಹುದು" ಎಂದು ಹೇಳಿದರು.

ಮುಂದುವರೆದು ಮಾತನಾಡಿದ ಅವರು, "ಈಗಾಗಲೇ ರೈತರಿಗೆ 10 ಎಚ್‌ಪಿ ವರೆಗೆ ಉಚಿತ ವಿದ್ಯುತ್ ಸೌಲಭ್ಯವಿದೆ. ಖಾಸಗೀಕರಣ ಜಾರಿಯಾದರೆ ರೈತರ ಪಂಪ್‌ಸೆಟ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸುವ ಸಾಧ್ಯತೆ ಇದೆ. ಇದರಿಂದ ರೈತರು ಹೆಚ್ಚಿನ ಬಿಲ್ ಪಾವತಿಸುವ ಪರಿಸ್ಥಿತಿ ಎದುರಾಗಬಹುದು. ಗ್ರಾಮೀಣ ಜನರ ಬದುಕಿನ ಮೇಲೂ ಪರಿಣಾಮ ಬೀರುವ ಆತಂಕವಿದೆ" ಎಂದರು.

ಭಾಗ್ಯಜ್ಯೋತಿ, ಕುಟೀರ ಜ್ಯೋತಿ, ಗಂಗಾ ಕಲ್ಯಾಣ ಸೇರಿದಂತೆ ಬಡವರಿಗಾಗಿ ಇರುವ ಹಲವು ಯೋಜನೆಗಳ ಮೇಲೂ ಪರಿಣಾಮ ಬೀರಬಹುದು. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸೇವೆಯ ಗುಣಮಟ್ಟ ಕುಸಿಯುವ ಸಾಧ್ಯತೆ ಇದೆ. ವಿದ್ಯುತ್ ಇಲಾಖೆಯ ನೌಕರರ ಹಿತಾಸಕ್ತಿಗೂ ಧಕ್ಕೆಯಾಗಬಹುದು ಎಂದು ಅವರು ಹೇಳಿದರು.

"ವಿದ್ಯುತ್ ಖಾಸಗೀಕರಣವಾದರೆ ಪ್ರತಿ ಮನೆಗೂ ಸ್ಮಾರ್ಟ್ ಮೀಟರ್ ಅಳವಡಿಸುವ ಪರಿಸ್ಥಿತಿ ಬರಬಹುದು. ಮೊಬೈಲ್ ರೀಚಾರ್ಜ್ ಮಾಡುವಂತೆ ವಿದ್ಯುತ್ ಬಳಕೆಗೆ ಕೂಡ ರೀಚಾರ್ಜ್ ಮಾಡುವ ವ್ಯವಸ್ಥೆ ಬಂದರೆ ಸಾಮಾನ್ಯ ಜನರಿಗೆ ತೊಂದರೆ ಉಂಟಾಗಲಿದೆ. ಆದ್ದರಿಂದ ಖಾಸಗೀಕರಣದ ವಿರುದ್ಧ ಎಲ್ಲರೂ ಒಗ್ಗಟ್ಟಾಗಿ ಹೋರಾಟ ನಡೆಸಬೇಕು" ಎಂದು ಕರೆ ನೀಡಿದರು.

ಸಭೆಯಲ್ಲಿ ನೂರಾರು ಗ್ರಾಮಸ್ಥರು ವಿದ್ಯುತ್ ಖಾಸಗೀಕರಣ ವಿರೋಧಿಸಿ ಆಕ್ಷೇಪಣಾ ಪತ್ರಗಳಿಗೆ ಸಹಿ ಹಾಕಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಮಾಲ್ ಸಾಬ್ ಹೆಡಗಿಮದ್ರಾ, ಅಂಬರೀಶ್ ಧಣಿ ಕೆಂಭಾವಿ, ಮರೆಪ್ಪ ಶಂಕರ್ ಬಂಡಿ, ಸುರೇಶ್ ತೆಳಿಗೇರಿ, ಭಾಗಣ್ಣ ತೆಳಿಗೇರಿ, ಮರೆಪ್ಪ ಕೋಟೆಕಲ್, ದೇವಿಂದ್ರಪ್ಪ ತಳಿಬಿಡಿ ಸೇರಿದಂತೆ ಹಲವು ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



**ಕಲಬುರಗಿ: ಇಲ್ಲಿನ ಕಪನೂರ್ ನಲ್ಲಿ ಅದ್ದೂರಿಯಾಗಿ ಜರುಗಿದ ಕಾರುಣ್ಣೆ ಉತ್ಸವದಲ್ಲಿ ಮಲ್ಲಯ್ಯಾ ಸ್ವಾಮಿ ಮಠಪತಿ, ಕುಪ್ಪೇಂದ್ರ ಬರಗಾಲಿ, ಪರಮೇಶ್ವರ ಬಟರಕಿ, ರೇವಣಸಿದ್ಧಯ್ಯ, ಚನ್ನು ಬರಗಾಲಿ, ಬಸು ದುರಕಿ, ಕೊಟಲಪ್ಪ ಕಾರಗಾರ, ಸಿದ್ದು ಶಾಬಾದಿ, ರೇವಪ್ಪ ತೆಗ್ಗಿನಮನಿ, ಸಿದ್ದು ಎಂ.ದುದನಿ, ಶಿವಲಿಂಗಪ್ಪ ದುದನಿ ಸೇರಿದಂತೆ ಹಲವರು ಭಾಗವಹಿಸಿದ್ದರು.**

# ನರೆಗಲ್ ಗ್ರಾಮ ಹಿಂಸಾಚಾರ ಹೇಯ ಕೃತ್ಯ

**ಹಾವೇರಿ,ಜೂ. 30–** ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ನರೆಗಲ್ ಗ್ರಾಮದಲ್ಲಿ ನಿನ್ನೆ ನಡೆದ ಹಿಂಸಾತ್ಮಕ ಘಟನೆ ಅತ್ಯಂತ ಹೇಯ ಕೃತ್ಯವಾಗಿದ್ದು, ಸಮಾಜದಲ್ಲಿ ಕೋಮು ಸೌಹಾರ್ದತೆಯನ್ನು ಕದಡುವ ಯತ್ನ ನಡೆದಿದ್ದು ಮತ್ತು ಉದ್ದೇಶ ಪೂರ್ವಕವಾಗಿ ಹೋರಿ ಬೆದರಿಸುವ ಯುವಕರ ಮೇಲೆ ಹಲ್ಲೆ ಮಾಡಿದ್ದು ಅತ್ಯಂತ ಖಂಡನೀಯ. ಕೂಡಲೇ ತಪ್ಪಿತಸ್ಥರ ಮೇಲೆ ಅತ್ಯಂತ ಕಠಿಣ ಶಿಸ್ತಿನ ಕ್ರಮ ತೆಗೆದುಕೊಂಡು ಅವರನ್ನು ಜೈಲಿಗೆ ಕಳುಹಿಸಬೇಕು ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಕೊಟ್ಟು ಸರ್ಕಾರ ಪರಿಹಾರ ಕೊಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಕುರಿತು ಎಕ್ಸ್ ಮಾಡಿರುವ ಅವರು, ಈ ಥರದ ದ್ವೇಷದ ವಾತಾವರಣ ಮಾಡುತ್ತಿರುವವರಿಗೆ ರಾಜಕೀಯ ಪ್ರೋತ್ಸಾಹ ಇರುವುದು ಬಹಳ ಸ್ಪಷ್ಟ ಮತ್ತು ಪೊಲೀಸ್ ಇಲಾಖೆ ಈ ಪ್ರಚೋದನೆ ಮಾಡುವ ನಾಯಕರ ಕೈಗೊಂಬೆಯಾಗಿ ಕೆಲಸ ಮಾಡುತ್ತಿದೆ. ಇದನ್ನು ನಿಯಂತ್ರಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ವಿಫಲವಾಗಿದ್ದಾರೆ. ಇದರ ಹಿಂದೆ ಕಾನೂನು ಬಾಹಿರ ಚಟುವಟಿಕೆ, ಒಸಿ, ಇಸ್ಪೀಟ್ ಆಡಿಸುವವರ ಕುಮ್ಮಕ್ಕು ಕೂಡ ಇದೆ. ಇದು ಜಿಲ್ಲೆಯಲ್ಲಿ ನಿರಂತರವಾಗಿ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.



ಕೂಡಲೇ ತಪ್ಪಿತಸ್ಥರ ಮೇಲೆ ಅತ್ಯಂತ ಕಠಿಣ ಶಿಸ್ತಿನ ಕ್ರಮ ತೆಗೆದುಕೊಂಡು ಅವರನ್ನು ಜೈಲಿಗೆ ಕಳುಹಿಸಬೇಕು ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಕೊಟ್ಟು ಸರ್ಕಾರ ಪರಿಹಾರ ಕೊಡಬೇಕು ಮತ್ತು ಅಲ್ಲಿಯ ಪೊಲೀಸ್ ಇಲಾಖೆ ಅಧಿಕಾರಿಗಳನ್ನು ಕೂಡಲೆ ವರ್ಗಾವಣೆ ಮಾಡಬೇಕೆಂದು ಗೃಹ ಸಚಿವರು ಮತ್ತು ಪೊಲೀಸ್ ಹಿರಿಯ ಅಧಿಕಾರಿಗಳಿಗೆ ಆಗ್ರಹಿಸುತ್ತೇನೆ ಎಂದು ತಿಳಿಸಿದ್ದಾರೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE